₹ 4 ಪುಟ: 4 ಸಂಪುಟ: 4 ಸಂಚಿಕೆ 78 newsbelagavi@gmail.com 9900332089 9900332089



# ಬೆಳಗಾವಿ ವರದಿ

ಪ್ರಧಾನ ಸಂಪಾದಕರು: ಸತೀಶ್.ಬಿ.ಜಿ

BELAGAVI VARADI KANNADA DAILY

ಕನ್ನಡ ದಿನಪತ್ರಿಕೆ

Volume : 4 Issue: 78 Tuesday, 09, MAY, 2023 RNI: KARKAN/2020/79084 Regn,No:G-2/PMG/KA/NK/BM/139/2021-23



## ಮಹಿಳೆಯರಿಗಾಗಿ ತಾಯಿ-ಮಗು ಆಸ್ಪತ್ರೆ ನಿರ್ಮಾಣ

### ಹೊಸ ಗ್ಯಾರಂಟಿ ಘೋಷಿಸಿದ ಡಿ.ಕೆ. ಶಿವಕುಮಾರ್



ಬೆಂಗಳೂರು: 2023ರ ಕರ್ನಾಟಕ ವಿಧಾನಸಭಾ ಚುನಾವಣೆಯ ರಣಕಣ ಅಂತಿಮ ಹಂತ ತಲುಪಿದ್ದು, ಮತದಾನಕ್ಕೆ ಎರಡೇ ದಿನಗಳು ಬಾಕಿ ಉಳಿದಿವೆ. ಮೇ 10ರಂದು ಮತದಾನ ನಡೆಯಲಿದೆ. (ಸೋಮವಾರ, ಮೇ 8) ಸಂಜೆ 6 ಗಂಟೆಯ ನಂತರ ಬಹಿರಂಗ ಪ್ರಚಾರಕ್ಕೆ ತೆರೆ ಬೀಳಲಿದ್ದು, ಇದಕ್ಕೂ ಮುನ್ನ ರಾಜಕೀಯ ಪಕ್ಷಗಳು ಮತ್ತು ನಾಯಕರು ಮತದಾರರ ಮನ ಗೆಲ್ಲಲು ಅಂತಿಮ ಹಂತದ ಕಸರತ್ತು ನಡೆಸುತ್ತಿದ್ದಾರೆ.

ಈ ಬಾರಿ ಅಧಿಕಾರದ ಗದ್ದುಗೆಗೇರಲು ಪ್ರಯತ್ನಿಸಿರುವ ಕಾಂಗ್ರೆಸ್, ಚುನಾವಣೆಗೂ ಮುನ್ನ ಹಲವು ಗ್ಯಾರಂಟಿ ಘೋಷಣೆಗಳನ್ನು ತಿಳಿಸಿದೆ. ಇವುಗಳನ್ನು ಕಾಂಗ್ರೆಸ್‌ನ ಪ್ರಣಾಳಿಕೆಯಲ್ಲೂ ಸೇ-ರಿಸಲಾಗಿದೆ.

ಈಗಾಗಲೇ ಪ್ರತಿ ಮನೆಯ ಯಜಮಾನಿಗೆ 2 ಸಾವಿರ ರೂ., ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್, ಪ್ರತಿಯೊಬ್ಬರಿಗೆ 10 ಕೆಜಿ ಉಚಿತ ಅಕ್ಕಿ, ನಿರುದ್ಯೋಗಿ ಪದವೀಧರರಿಗೆ 3000 ರೂಪಾಯಿ, ಅಂಗನವಾಡಿ ಕಾರ್ಯಕರ್ತರಿಗೆ 15 ಸಾವಿರ ವೇತನ, ಆಶಾ ಕಾರ್ಯಕರ್ತೆಯರಿಗೆ 8 ಸಾವಿರ ರೂ. ವೇತನದಂತಹ ಗ್ಯಾರಂಟಿಗಳನ್ನು ಘೋಷಿಸಿದೆ.

ಇದೀಗ ಕೊನೆಯ ದಿನದ ಚುನಾವಣಾ ಪ್ರಚಾರದ ವೇಳೆ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅವರು ಕಾಂಗ್ರೆಸ್ ಪಕ್ಷದ ಪರವಾಗಿ ಮತ್ತೊಂದು ಗ್ಯಾರಂಟಿ ಭರವಸೆಯನ್ನು ಘೋಷಿಸಿದ್ದಾರೆ.

ಬೆಂಗಳೂರಿನ ಸದಾಶಿವನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, "ಈ ರಾಜ್ಯಕ್ಕೆ ಒಳ್ಳೆಯ ಸರ್ಕಾರ ಕೊಡ್ತೀವಿ. ರೈತರಿಗಾಗಿ ಎಷ್ಟು ಸಾಧ್ಯವೋ ಅಷ್ಟು ಕೆರೆಗಳನ್ನು ತುಂಬಿಸುತ್ತೇವೆ. ಹೆಣ್ಣುಮಕ್ಕಳಿಗಾಗಿ ಪ್ರತಿ ತಾಲೂಕಿನಲ್ಲೂ ತಾಯಿ-ಮಗು ಆಸ್ಪತ್ರೆಯನ್ನು ಹೊಸದಾಗಿ ನಿರ್ಮಿಸಿ, ಉಚಿತವಾಗಿ ಹೆರಿಗೆ ಸೌಲಭ್ಯ ಸಿಗುವಂತೆ ಮಾಡುತ್ತೇವೆ," ಎಂದು ತಿಳಿಸಿದರು.

ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ, ಎಲ್ಲರನ್ನೂ ಸಮಾನತೆಯಿಂದ ನೋಡುತ್ತೇವೆ. ಮಕ್ಕಳಿಗೆ ಗ್ರಾಮೀಣ ಭಾಗದಲ್ಲೇ ಉತ್ತಮ ಶಿಕ್ಷಣ ವ್ಯವಸ್ಥೆ ಕಲ್ಪಿಸಿ, ಬೆಂಗಳೂರಿನಂತಹ ನಗರಗಳಿಗೆ ಬರುವುದನ್ನು ತಪ್ಪಿಸುತ್ತೇವೆ," ಎಂದು ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

## ಓಟಿಗಾಗಿ ಗಲ್ಲಿ ಗಲ್ಲಿ ಸುತ್ತುತ್ತಿರುವ ಮೋದಿ: ಖರ್ಗೆ ವಾಗ್ದಾಳಿ



ಕಲಬುರಗಿ: 'ಮಣಿಪುರದಲ್ಲಿ ಗಲಭೆ ನಡೆದು 54 ಜನರು ಸಾವನ್ನಪ್ಪಿದ್ದಾರೆ. ಕಾಶ್ಮೀರದ ಕಣಿವೆಯಲ್ಲಿ ಉಗ್ರರ ದಾಳಿಯಲ್ಲಿ ಯೋಧರು ಹುತಾತ್ಮರಾಗಿದ್ದಾರೆ. 56 ಇಂಚಿನ ಎದೆ ಇರುವ ಪ್ರಧಾನಿ ನರೇಂದ್ರ ಮೋದಿ ಅವರು ಮತಕ್ಕಾಗಿ ರಾಜ್ಯದ ಗಲ್ಲಿ ಗಲ್ಲಿಯಲ್ಲಿ ಅಲೆಯುತ್ತಿದ್ದಾರೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವ್ಯಂಗ್ಯವಾಡಿದರು.

ನಗರದಲ್ಲಿ ಭಾನುವಾರ ಕಲಬುರಗಿ ಉತ್ತರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಶಾಸಕಿ ಕನೀಜ್ ಫಾತಿಮಾ ಅವರ ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಪ್ರಧಾನಿಯ ಹುದ್ದೆಯಲ್ಲಿ ಇರುವವರು ಒಂದು ಚುನಾವಣೆಗಾಗಿ ನಾಲ್ಕೈದು ಬಾರಿ ಕಲಬುರಿಗೆ ಬಂದಿದ್ದಾರೆ. ದೇಶದ ಪ್ರೇಮದ ಬಗ್ಗೆ ಮಾತನಾಡುವವರು ಇಲ್ಲಿನ ಭ್ರಷ್ಟಾಚಾರ, ರೈತ ಹಿತರಕ್ಷಣೆ, ಅಲ್ಪಸಂಖ್ಯಾತರ ಮೀಸಲಾತಿಯ ಬಗ್ಗೆ ಬಾಯಿ ತೆರೆಯುತ್ತಿಲ್ಲ. ಜನರ ಬಗ್ಗೆ ಕಾಳಜಿ ಇಲ್ಲದ ಸರ್ಕಾರವನ್ನು ಕಿತ್ತೊಗೆಯಬೇಕು' ಎಂದರು.

ಕನೀಜ್ ಫಾತಿಮಾ ಮಾತನಾಡಿ, 'ಕಾಂಗ್ರೆಸ್‌ಗೆ ಬಿಜೆಪಿ ಎದುರಾಳಿ ಆಗಿದ್ದರೂ ಬೇರೊಂದು ಪಕ್ಷದ ಅಭ್ಯರ್ಥಿ ನನ್ನ ಬಗ್ಗೆ ಸಲ್ಲದ ಅಪಪ್ರಚಾರ ಮಾಡುತ್ತಿದ್ದಾರೆ. ಇದನ್ನು ನಿಮ್ಮ ಮೇಲೆ ಬಿಡುತ್ತೇನೆ' ಎಂದರು.

ಕನೀಜ್ ಫಾತಿಮಾ ಬೆಂಬಲಿಸಲು ತೀರ್ಮಾನ' ಕಲಬುರಗಿ: ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕನೀಜ್ ಫಾತಿಮಾ ಅವರನ್ನು ಬೆಂಬಲಿಸಲು ಮುಸ್ಲಿಂ ಸಮಾಜದ ಉದ್ಯಮಿಗಳು ಹಾಗೂ ವ್ಯಾಪಾರಸ್ಥರು ತೀರ್ಮಾನಿಸಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಭೀಮರೆಡ್ಡಿ ಪಾಟೀಲ ಕುರಕುಂದಾ ತಿಳಿಸಿದ್ದಾರೆ. 'ಭಾನುವಾರ ನಡೆದ ಮುಸ್ಲಿಂ ಸಮುದಾಯದ ಸಭೆಯಲ್ಲಿ ಇಂಥದೊಂದು ನಿರ್ಣಯವನ್ನು ಕೈಗೊಳ್ಳಲಾಗಿದೆ.

ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯಗಳು ಸೇರಿದಂತೆ ಆಯಾ ಸಮುದಾಯಗಳ ಹಿತ ಕಾಪಾಡುವಲ್ಲಿ ಕನೀಜ್ ಫಾತಿಮಾ ಅವರು ಯಶಸ್ವಿಯಾಗಿದ್ದಾರೆ. ಆದರೆ ಮುಂಬರುವ ದಿನಗಳಲ್ಲಿ ಎಲ್ಲ ವರ್ಗದ ಜಾತಿ ಸಮುದಾಯಗಳ ಜನರ ಹಿತ ಕಾಯುವುದು ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಲು ಅವರ ಕೈ ಬಲಪಡಿಸುವ ನಿಟ್ಟಿನಲ್ಲಿ ಇಂತಹದೊಂದು ಗಟ್ಟಿಯಾದ ನಿರ್ಧಾರವನ್ನು ಕೈಗೊಳ್ಳಲಾಗಿದೆ' ಎಂದರು. ಉದ್ಯಮಿ ಕರೀಮ್ ಮಂಚಾಲಿ ಆರಿಫ್ ಮನಿಯಾರ್ ಮುಜೀಬ್ ಹೆಲ್ಪರ್ ಜಾವೀದ್ ಸಾಬ್ ಜಮೀಲ್ (ಸೆಮಿನ ಕಲೆಕ್ಷನ್) ಅಲ್ತಾಫ್ ಇನಾಮದಾರ್ ಮೆಹಬೂಬ್ ಅಲಿ (ಮಹಾರಾಜ ಹೋಟೆಲ್) ಮುಜೀಬುದ್ದೀನ್ ಫಿರೋಜ್ ಬಾಗವಾನ್ ಉಸ್ಮಾನ್ ಅಲಿ ಜಾಕೀರ್ ಅಲಿ ಸಾಬ್ ಸೇರಿದಂತೆ ಭಾಂಡೆ ಬಜಾರ್ ವ್ಯಾಪಾರಿಗಳು ಇದ್ದರು.

## ಸೋನಿಯಾ ವಿರುದ್ಧ ಬಿಜೆಪಿ ದೂರು



ಬೆಂಗಳೂರು: ಕರ್ನಾಟಕದ ಪ್ರತಿಷ್ಠೆ, ಸಾರ್ವಭೌಮತ್ವ ಅಥ-ವಾ ಸಮಗ್ರತೆಗೆ ಧಕ್ಕೆ ತರಲು ಯಾ-ರಿಗೂ ಅವಕಾಶ ನೀಡುವುದಿಲ್ಲ ಎಂಬ ಹೇಳಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ವಿರುದ್ಧ ಬಿಜೆಪಿ ಸೋಮವಾರ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದ್ದು, ಅವರ ವಿರುದ್ಧ ಎಫ್‌ಐಆರ್ ದಾಖಲಿಸಲು ನಿರ್ದೇಶನ ನೀಡುವಂತೆ ಮನವಿ ಮಾಡಿದೆ. ಶನಿವಾರ ಹುಬ್ಬಳ್ಳಿಯಲ್ಲಿ ನಡೆದ ಪ್ರಚಾರ ಸಭೆಯಲ್ಲಿಸೋನಿಯಾ ಅವರ ಭಾಷಣವನ್ನು ಉಲ್ಲೇಖಿಸಿ,6.5 ಕೋಟಿ ಕನ್ನಡಿಗರಿಗೆ ಬಲವಾದ ಸಂದೇಶವನ್ನು ಕಳುಹಿಸುತ್ತಾರೆ" ಎಂದು ಕಾಂಗ್ರೆಸ್ ಟ್ವೀಟ್ ಮಾಡಿದ್ದು, ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡುವ ಚಿತ್ರಗಳನ್ನು ಸಹ ಪೋಸ್ಟ್ ಮಾಡಿ 'ಕರ್ನಾಟಕದ ಪ್ರತಿಷ್ಠೆ, ಸಾರ್ವಭೌಮತ್ವ ಅಥವಾ ಸಮಗ್ರತೆಗೆ ಧಕ್ಕೆ ತರಲು ಯಾ-ರಿಗೂ ಅವಕಾಶ ನೀಡುವುದಿಲ್ಲ' ಎಂದು ಟ್ವೀಟ್ ನಲ್ಲಿ ಬರೆಯಲಾಗಿತ್ತು. ಈ ಹೇಳಿಕೆಯನ್ನು "ಆಘಾತಕಾರಿ ಮತ್ತು ಸ್ವೀಕಾರಾರ್ಹವಲ್ಲ" ಎಂದು ಬಣ್ಣಿಸಿ ಕೇಂದ್ರ ಸಚಿವೆ,ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿಯ ಸಂಚಾಲಕಿ ಶೋಭಾ ಕರಂದ್ಲಾಜೆ ಅವರು ದೂರನ್ನು ದಾಖಲಿಸಿದ್ದು, ಗಾಂಧಿ ಅವರು ಮಾದರಿ ನೀತಿ ಸಂಹಿತೆಯ ನಿಬಂಧನೆಗಳನ್ನು ಉಲ್ಲಂಘಿಸಿದ್ದಾರೆ ಮತ್ತು ಇಂತಹ ಹೇಳಿಕೆಯನ್ನು ನೀಡಿದ್ದಕ್ಕಾಗಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಇಸಿಗೆ ಮನವಿ ಮಾಡಿದ್ದಾರೆ. ಎಫ್‌ಐಆರ್ ದಾಖಲಿಸಲು ಮತ್ತು ಅನುಕರಣೀಯ ದಂಡನಾತ್ಮಕ ಕ್ರಮ ಕೈಗೊಳ್ಳಲು ನಿರ್ದೇಶನ ನೀಡುವಂತೆ ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದಾರೆ.

## ಎಸ್‌ಎಸ್‌ಎಲ್‌ಸಿ ಫಲಿತಾಂಶ: ಬಾಲಕಿಯರೇ ಮೇಲುಗೈ



ಬೆಂಗಳೂರು: 2022-23ನೇ ಸಾಲಿನ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾಗಿದೆ.

ಈ ವರ್ಷ ಶೇ 83.89 ಫಲಿತಾಂಶ ಬಂದಿದ್ದು, ಪರೀಕ್ಷೆ ಬರೆದ 8,35,102 ವಿದ್ಯಾರ್ಥಿಗಳಲ್ಲಿ 7,00,619 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ನಾಲ್ವರು ವಿದ್ಯಾರ್ಥಿಗಳು 625ಕ್ಕೆ 625 ಪಡೆದಿದ್ದಾರೆ

ಈ ಬಾಲಕಿಯರೇ ಮೇಲುಗೈ ಸಾಧಿಸಿದ್ದು, ಶೇ 83.89 ವಿದ್ಯಾರ್ಥಿನಿಯರು, ಶೇ 80.08 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಚಿತ್ರದುರ್ಗ ಪ್ರಥಮ ಸ್ಥಾನ, ಮಂಡ್ಯ 2ನೇ, ಹಾಸನ 3ನೇ ಸ್ಥಾನ ಗಳಿಸಿವೆ. ಯಾದಗಿರಿ ಜಿಲ್ಲೆ ಕೊನೆಯ ಸ್ಥಾನ ಪಡೆದಿದೆ.

ಚಿತ್ರದುರ್ಗಕ್ಕೆ ಶೇ. 96.80, ಮಂಡ್ಯ ಜಿಲ್ಲೆಗೆ ಶೇ. 96.74ರಷ್ಟು ಫಲಿತಾಂಶ ಬಂದಿದೆ.

ಕೊನೆಯ ಸ್ಥಾನ ಗಳಿಸಿರುವ ಯಾದಗಿರಿ ಜಿಲ್ಲೆಯಲ್ಲಿ ಶೇ.75.49ರಷ್ಟು ಫಲಿತಾಂಶ ಬಂದಿದೆ.

**ನಾಲ್ವರು ವಿದ್ಯಾರ್ಥಿಗಳಿಗೆ 625ಕ್ಕೆ 625 ಅಂಕ**

* ಭೂಮಿಕಾ ಪೈ: ನ್ಯೂ ಮೆಕಾಲೆ ಶಾಲೆ, ಹೊಸೂರು ರಸ್ತೆ, ಬೆಂಗಳೂರು
* ಭೀಮನಗೌಡ ಪಾಟೀಲ್: ಆಕ್ಸ್‌ಫರ್ಡ್ ಹೈಸ್ಕೂಲ್, ಮುದ್ದೇಬಿಹಾಳ, ವಿಜಯಪುರ
* ಅನುಪಮಾ ಶ್ರೀಶೈಲ್ ಹಿರೆಹೊಳಿ: ಶ್ರೀ ಕುಮಾರೇಶ್ವರ ಶಾಲೆ, ಸವದತ್ತಿ, ಬೆಳಗಾವಿ
* ಯಶಸ್ ಗೌಡ: ಬಿಜಿಎಸ್ ಶಾಲೆ, ಅಗಲಗುರ್ಕಿ, ಚಿಕ್ಕಬಳ್ಳಾಪುರ ಜಿಲ್ಲೆ

## ಬಿಎಮ್‌ಟಿಸಿ ಬಸ್‌ನಲ್ಲಿ ರಾಹುಲ್ ಗಾಂಧಿ ಸಂಚಾರ




ಬೆಂಗಳೂರು: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಬೆಂಗಳೂ-ರಿನ ಬಿಎಂಟಿಸಿ ಬಸ್ನಲ್ಲಿ ಸಾಮಾನ್ಯ ನಾಗರಿಕರಂತೆ ಸೋಮವಾರ ಸಂಚ-ರಿಸಿದ್ದಾರೆ. ರಾಜ್ಯ ವಿಧಾನಸಭಾ ಚುನಾವಣೆಗೆ ಇನ್ನೂ 2 ದಿನಗಳು ಬಾಕಿಯಿದೆ. ಸಂಜೆ ಚುನಾವನಾ ನೀತಿ ಸಂಹಿತೆ ಜಾರಿ ಹಿನ್ನೆಲೆಯಲ್ಲಿ ವಿವಿಧ ಪಕ್ಷದ ನಾಯಕರು ಗೆಲುವು ಸಾಧಿಸಲು ವಿವಿಧ ರೀತಿಯ ಸಿದ್ಧತೆಗಳನ್ನು ನಡೆಸುತ್ತಿದ್ದಾರೆ. ಈ ಮಧ್ಯೆ ಸೋಮವಾರ ಬೆಳಗ್ಗೆ ರಾಹುಲ್ ಗಾಂಧಿ ಅವರು ಬಿಎಂಟಿಸಿ ಬಸ್ನಲ್ಲಿ ರಾಜ್ಯರಾಜಧಾನಿ ಬೆಂಗಳೂರಿನಲ್ಲಿ ಸಂಚಾರ ನಡೆಸಿದ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಕನ್ನಿಂಗ್ ಹ್ಯಾಮ್ ರಸ್ತೆಯಿಂದ ರಾಮಮೂರ್ತಿ ನಗರ ಕಡೆ ಹೋಗುತ್ತಿದ್ದ ಬಸ್‌ನಲ್ಲಿ ರಾಹುಲ್ ಗಾಂಧಿ ಪ್ರಯಾಣ ಬೆಳೆಸಿದ್ದಾರೆ. ಈ ವೇಳೆ ಪ್ರಯಾಣಿಕರ ಜೊತೆ ಸಂವಾದ ನಡೆಸುತ್ತಲೇ ಸಾರ್ವಜನಿಕರಂತೆ ಬಸ್ನಲ್ಲಿ ಪ್ರಯಾಣಿಸಿದರು. ಸುಮಾರು 6 ಕಿಮೀಗೂ ಹೆಚ್ಚು ದೂರ ಬಸ್ನಲ್ಲೇ ಪ್ರಯಾಣ ಬೆಳೆಸಿದ್ದಾರೆ.

ಭಾನುವಾರ ರಾಹುಲ್ ಗಾಂಧಿ ಅವರು ಫುಡ್ ಡೆಲಿವರಿ ಬಾಯ್ ಜೊತೆ ದ್ವಿಚಕ್ರ ವಾಹನದಲ್ಲಿ ರಾಜ್ಯ ರಾಜಧಾನಿ ಬೆಂಗಳೂ-ರಿನಲ್ಲಿ ಸಂಚಾರಿಸಿದ್ದರು. ಅದಾದ ಬಳಿಕ ಡೆಲಿವರಿ ಬಾಯ್ ಜೊತೆ ಹೋಟೆಲ್‌ವೊಂದರಲ್ಲಿ ಸಂವಾದ ನಡೆಸಿ, ಅವರಿಗಾಗುವ ತೊಂದರೆಗಳ ಕುರಿತು ಚರ್ಚೆ ನಡೆಸಿದ್ದರು.

## ನಾನು ಕರ್ನಾಟಕದ ಭೂಮಿ ಪುತ್ರ: ಖರ್ಗೆ ಭಾವುಕ ನುಡಿ



ಕಲಬುರಗಿ: ಕರ್ನಾಟಕದ ಭೂಮಿ ಪುತ್ರನಾಗಿರುವ ನನ್ನನ್ನು ಎಐಸಿಸಿ ಅಧ್ಯಕ್ಷರನ್ನಾಗಿ ಮಾಡಿದ್ದಕ್ಕೆ ನೀವೆಲ್ಲರೂ ಹೆಮ್ಮೆ ಪಡಬೇಕು. ಯಾರು ಏನೇ ಹೇಳಿದರೂ ನಾನು ನನ್ನ ಕೊನೆಯ ಉಸಿರು ಇರುವವರೆಗೂ ಬಡವ-ರಿಗಾಗಿ ಹೋರಾಟವನ್ನು ಮುಂದುವರೆಸುತ್ತೇನೆ ಮತ್ತು ಅವರ ಹಿತಾಸಕ್ತಿಗಳನ್ನು ರಕ್ಷಿಸಲು ಪ್ರಯತ್ನಿಸುತ್ತೇನೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾವುಕ ಭಾಷಣ ಮಾಡಿದರು.

ಕರ್ನಾಟಕ ವಿಧಾನಸಭೆ ಚುನಾವಣೆಯ ಬಹಿರಂಗ ಸಭೆಯ ಅಂತಿಮ ದಿನವಾದ ಇಂದು ಕಲಬುರಗಿಯಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಭಾವುಕ ಭಾಷಣ ಮಾಡಿ ಮತಯಾಚನೆ ನಡೆಸಿದ ಅವರು, ನನ್ನನ್ನು ಮುಗಿಸಲೇಬೇಕು ಎಂದು ಬಿಜೆಪಿ ನಾಯಕರ ಮನಸ್ಸಿಗೆ ಬಂದಿರಬಹುದು, ಇಲ್ಲದಿದ್ದರೆ ಖರ್ಗೆ ಮತ್ತು ಕುಟುಂಬವನ್ನು ಮುಗಿಸುತ್ತೇನೆ ಎಂದು ಹೇಳುವ ಧೈರ್ಯ ಯಾರಿಗೆ ಇರುತ್ತದೆ? ಎಂದು ಹೇಳಿದ ಮಲ್ಲಿಕಾರ್ಜುನ ಖರ್ಗೆ, ಯಾರೂ ನನ್ನನ್ನು ಸುಲಭವಾಗಿ ಮುಗಿಸಲು ಸಾಧ್ಯವಿಲ್ಲ. ನನ್ನ ರಕ್ಷಣೆಗೆ ಬಾಬಾಸಾಹೇಬರ ಸಂವಿಧಾನವಿದೆ, ಕಲಬುರಗಿ, ಕರ್ನಾಟಕದ ಜನತೆ ನನ್ನ ಬೆನ್ನಿಗಿದ್ದಾರೆ. ಈಗ ಎಐಸಿಸಿ ಅಧ್ಯಕ್ಷರಾದ ಮೇಲೆ ದೇಶದ ಜನ ನನ್ನ ಬೆನ್ನಿಗಿದ್ದಾರೆ ಎಂದು ಹೇಳಿದರು.

ನಾನು ಸಹ ಬಲಶಾಲಿಯಾಗಿದ್ದೇನೆ. ಒಬ್ಬ ಮನುಷ್ಯ ನೂರು ವರ್ಷ ಅಥವಾ 90 ವರ್ಷಗಳವರೆಗೆ ಬದುಕಬಹುದು, ಆದರೆ ಭಾರತದಲ್ಲಿ ಸರಾಸರಿ ಜೀವನವು 70 ಅಥವಾ 71 ಆಗಿದೆ. ನನಗೆ ಈಗ 81 ವರ್ಷ, ನಾನು ಬದುಕಿದರೆ ಇನ್ನೂ ಎಂಟು ಅಥವಾ ಒಂಬತ್ತು ವರ್ಷ ಬದುಕಬಹುದು. ಚಿಂತಿಸಬೇಡಿ, ನನ್ನ ಕೊನೆಯ ಉಸಿರು ಇರುವವರೆಗೂ ನಾನು ಬಡವರಿಗಾಗಿ ಹೋರಾಡುತ್ತೇನೆ ಮತ್ತು ಅವರನ್ನು ರಕ್ಷಿಸಲು ಪ್ರಯತ್ನಿಸುತ್ತೇನೆ. ಜನರು ನನ್ನೊಂದಿಗೆ ಇರುವವರೆಗೂ ನನಗೆ ಯಾವುದೇ ಭಯವಿಲ್ಲ ಎಂದು ಖರ್ಗೆ ಹೇಳಿದರು.

## ಬಹಿರಂಗ ಪ್ರಚಾರದ ಅಂತಿಮ ದಿನ ಸುಳೇಬಾವಿಯಲ್ಲಿ ಭರ್ಜರಿ ಪ್ರಚಾರ ನಡೆಸಿದ ಲಕ್ಷ್ಮೀ ಹೆಬ್ಬಾಳಕರ್





ಬೆಳಗಾವಿ: ಮೇ 10ರಂದು ನಡೆಯಲಿರುವ ವಿಧಾನಸಭೆ ಚುನಾವಣೆಯ ಬಹಿರಂಗ ಪ್ರಚಾರದ ಅಂತಿಮ ದಿನವಾದ ಸೋಮವಾರ ಸುಳೇಬಾವಿಯಲ್ಲಿ ಬೆಳಗಾವಿ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮೀ ಹೆಬ್ಬಾಳಕರ್ ಭರ್ಜರಿ ಪ್ರಚಾರ ನಡೆಸಿದರು.


ಆದಿಶಕ್ತಿ ಸುಳೇಭಾವಿಯ ಮಹಾಲಕ್ಷ್ಮೀ ದೇವಿಗೆ ಪೂಜೆ ಸಲ್ಲಿಸುವುದರೊಂದಿಗೆ ಪ್ರಚಾರ ಆರಂಭಿಸಿದ್ದ ಲಕ್ಷ್ಮೀ ಹೆಬ್ಬಾಳಕರ್, ಅದೇ ಸ್ಥಳದಲ್ಲಿ ಶ್ರೀ ಮಹಾಲಕ್ಷ್ಮಿ ದೇವಿಯ ಆಶೀರ್ವಾದದೊಂದಿಗೆ ಕೊನೆಯ ಬಹಿರಂಗ ಪ್ರಚಾರವನ್ನೂ ನಡೆಸಿದರು. ಕಿಕ್ಕಿರಿದು ಸೇರಿದ್ದ ಜನಸ್ತೋಮದ ಮಧ್ಯೆ ಸುಳೇಬಾವಿಯ ಗಲ್ಲಿ ಗಲ್ಲಿಗಳಲ್ಲಿ ರೋಡ್ ಶೋ ನಡೆಸಿದ ಲಕ್ಷ್ಮೀ ಹೆಬ್ಬಾಳಕರ್, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬೆಂಬಲ ನೀಡುತ್ತಿರುವುದಕ್ಕೆ ನಿಮ್ಮೆಲ್ಲರಿಗೂ ಹೃದಯಪೂರ್ವಕ ಧನ್ಯವಾದಗಳು ಎಂದು ಹೇಳಿದರು.

ನಾನು ಏನೇ ಕೆಲಸ ಮಾಡುವುದಿದ್ದರೂ ಮೊದಲು ಸುಳೇಬಾವಿಯ ಮಹಾಲಕ್ಷ್ಮಿಯ ಆಶೀರ್ವಾದ ಪಡೆದೇ ಮಾಡುತ್ತೇನೆ. ದೇವಿಯ ಆಶೀರ್ವಾದ ಸದಾ ನನ್ನ ಮೇಲಿರುತ್ತದೆ. ಹಾಗೆಯೇ ಸುಳೇಬಾವಿಯ ಜನರೂ ಸಹ ಎಂದೂ ನನ್ನ ಕೈ ಬಿಡುವುದಿಲ್ಲ. ಅದಕ್ಕೆ ಸಾಕ್ಷಿ ಎನ್ನುವಂತೆ ಇಂದು ಇಲ್ಲಿ ಜನರು ಸೇರಿದ್ದೀರಿ. ನಾನು ಕಳೆದ 5 ವರ್ಷದಲ್ಲಿ ನಿಮ್ಮೆಲ್ಲರ ಆಶೀರ್ವಾದದಿಂದ ಯಶಸ್ವಿಯಾಗಿ ಕೆಲಸ ಮಾಡಲು ಸಾಧ್ಯವಾಯಿತು. ಮತ್ತೆ 5 ವರ್ಷ ನಿಮ್ಮೆಲ್ಲರ ಸೇವೆ ಮಾಡಲು ಅವಕಾಶ ಮಾಡಿಕೊಡಿ. ದಯವಿಟ್ಟು ಈ ಚುನಾವಣೆಯಲ್ಲಿ ಇವಿಎಂ ಯಂತ್ರದಲ್ಲಿ ನನ್ನ ಕ್ರಮ ಸಂಖ್ಯೆ 4, ಹಸ್ತದ ಗುರುತಿಗೆ ತಾವೆಲ್ಲರೂ ಮತಗಳನ್ನು ನೀಡಿ ಹರಸಿ, ಆಶೀರ್ವದಿಸಬೇಕೆಂದು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ ಎಂದು ಅವರು ಹೇಳಿದರು.

ನಾನು ಕಳೆದ ಸುಮಾರು ಒಂದು ತಿಂಗಳು ಕ್ಷೇತ್ರವನ್ನೆಲ್ಲ ಸುತ್ತಾಡಿದಾಗ ಸೇರುತ್ತಿರುವ ಜನರು, ಅವರ ಬೆಂಬಲ ನೋಡಿದರೆ ನನಗೆ ಪ್ರತಿಸ್ಪರ್ಧಿಯೇ ಇಲ್ಲವೇನೋ ಎನ್ನುವ ಭಾವನೆ ಮೂಡಿದೆ. ಪಕ್ಷಾತೀತವಾಗಿ ಕ್ಷೇತ್ರದ ಜನರು ನನ್ನೊಂದಿಗೆ ನಿಂತಿದ್ದಾರೆ. ಎಲ್ಲರ ಬೆಂಬಲದೊಂದಿಗೆ ಮತ್ತೊಮ್ಮೆ ಆಯ್ಕೆಯಾಗಿ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುಂದಿನ ದಿನಗಳಲ್ಲಿ ಇನ್ನಷ್ಟು ಬೃಹತ್ ಯೋಜನೆಗಳನ್ನು ಕ್ಷೇತ್ರಕ್ಕೆ ತರುತ್ತೇನೆ ಎಂದು ಅನರು ಭರವಸೆ ನೀಡಿದರು.

ಈ ಸಮಯದಲ್ಲಿ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಗ್ರಾಮ ಪಂಚಾಯತಿಯ ಅಧ್ಯಕ್ಷ, ಉಪಾಧ್ಯಕ್ಷರು, ಸರ್ವಸದಸ್ಯರು, ಸರ್ವ ಸಮಾಜಗಳ ಮುಖಂಡರು, ಗ್ರಾಮದ ಜನರು ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

## ಬಿಜೆಪಿ ಅಭ್ಯರ್ಥಿ ಪರ ಮತದಾರರಿಗೆ ಬೆಳ್ಳಿ ಗಣಪ ಹಂಚುತ್ತಿದ್ದ ಯುವಕ ವಶ



ದಾವಣಗೆರೆ: ರಾಜ್ಯದಲ್ಲಿ ವಿಧಾನಸಭೆ ಚುನಾವಣಾ ಕಾವು ಜೋರಾಗಿದ್ದು, ಇಂದು ಬಹಿರಂಗ ಪ್ರಚಾರಕ್ಕೆ ಕೊನೆಯ ದಿನವಾಗಿದೆ.

ಅದರಂತೆ ಮತದಾರರನ್ನ ಸೆಳೆಯಲು ಹಲವಾರು ಆಮಿಷ ಗಳನ್ನ ಒಡ್ಡುತ್ತಿದ್ದಾರೆ. ಇದೀಗ ದಾವಣಗೆರೆಯ ದಕ್ಷಿಣ ಕ್ಷೇತ್ರದಲ್ಲಿ ಬೆಳ್ಳಿ ಗಣಪನನ್ನ ಹಂಚಲಾಗುತ್ತಿದೆ.

ಹೌದು ಕ್ಷೇತ್ರದಲ್ಲಿ ಬೆಳ್ಳಿ ಗಣೇಶ ಸದ್ದು ಮಾಡುತ್ತಿದ್ದಾನೆ. ಆದರೀಗ ಇದೆ ವಿಘ್ನ ವಿನಾಶಕನ ಮೂಲಕ ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿಜಿ ಅಜಯ ಕುಮಾರ ವಿಘ್ನ ಮೈ ಮೇಲೆ ಎಳೆದುಕೊಂಡಿದ್ದಾರೆ. ಹೌದು ಮತದಾರರನ್ನ ಸೆಳೆಯಲು ಬೆಳ್ಳಿ ಗಣಪ ಹಂಚುವಾಗ ಅಜಯಕುಮಾರ ಹುಡುಗರು ಸಿಕ್ಕಿ ಬಿದ್ದಿದ್ದಾರೆ. ಇನ್ನು ನಗರದ ವ್ಯಾಪ್ತಿಯ ವಿವಿಧ ಮನೆಗಳಿಗೆ ಬೆಳ್ಳಿ ಗಣೇಶ ವಿಗ್ರಹ ಹಂಚುತ್ತಿದ್ದರು.

ಈ ವೇಳೆ ಸಿಕ್ಕಿಬಿದ್ದ ತೇಜಸ್ ಎಂಬ 22 ವರ್ಷದ ಯುವಕನನ್ನ ವಶಕ್ಕೆ ಪಡೆದು, ಬೆಳ್ಳಿ ಮೂರ್ತಿಯನ್ನ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ದಾವಣಗೆರೆ ದಕ್ಷಿಣ ಕ್ಷೇತ್ರದ ಚುನಾವಣಾ ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿ ಶಶಿಧರ್ ಅವರು ಎಫ್ ಐ ಆರ್ ದಾಖಲು ಮಾಡಿದ್ದಾರೆ. ನಗರದ ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಐಎಎಸ್ ಆಗುವ ಕನಸು: ಅನುಪಮಾ ಶ್ರೀಶೈಲ ಹಿರೇಹೊಳಿ



ಬೆಳಗಾವಿ: ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಜಿಲ್ಲೆಯ ಸವದತ್ತಿಯ ಕುಮಾರೇಶ್ವರ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿನಿ ಅನುಪಮಾ ಶ್ರೀಶೈಲ ಹಿರೇಹೊಳಿ 625ಕ್ಕೆ 625 ಅಂಕ ಗಳಿಸುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಈ ಬಗ್ಗೆ ಮಾತನಾಡಿದ ಅನುಪಮಾ, 'ಶೈಕ್ಷಣಿಕ ವರ್ಷದ ಆರಂಭದಿಂದಲೇ ಪರೀಕ್ಷೆಗೆ ತಯಾರಿ ನಡೆಸಿದ್ದೆ. ನಿತ್ಯ ಬೆಳಿಗ್ಗೆ ಶಾಲೆಗೆ ಹೋಗುವ ಮುನ್ನ, ಎರಡು ತಾಸು ಓದುತ್ತಿದ್ದೆ. ಶಾಲೆಯಿಂದ ಮನೆಗೆ ಮರಳಿದ ನಂತರವೂ ರಾತ್ರಿ 12ರವರೆಗೆ ಓದು ಮುಂದುವರಿಸಿದ್ದೆ. ನಿರೀಕ್ಷೆಯಂತೆ ಮೊದಲ ಸ್ಥಾನ ಸಿಕ್ಕಿರುವುದು ಖುಷಿ ತಂದಿದೆ' ಎಂದರು.

## ರಮೇಶ ಜಾರಕಿಹೊಳಿಗೆ ಬೆಂಬಲ ಘೋಷಿಸಿದ ಮುಸ್ಲಿಂ ಸಮುದಾಯ



ಗೋಕಾಕ: ಮೇ 10 ರಂದು ಜರಗುವ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯದ ಸಂಪೂರ್ಣ ಬೆಂಬಲ ಬಿಜೆಪಿ ಅಭ್ಯರ್ಥಿ ರಮೇಶ ಜಾರಕಿಹೊಳಿ ಅವರಿಗೆ ನೀಡುವುದಾಗಿ ಮುಸ್ಲಿಂ ಸಮುದಾಯದ ಮುಖಂಡರು ನಿರ್ಣಯ ಕೈಗೊಂಡರು

ರವಿವಾರದಂದು ಇಲ್ಲಿನ ಲಕ್ಕಡಗಲ್ಲಿ ಶಾದಿ ಮಹಲ್ ನಲ್ಲಿ ನಗರದ 40 ಜಮಾತಗಳ ಮುಸ್ಲಿಂ ಸಮುದಾಯ ಮುಖಂಡರ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಈ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮುಖಂಡ ಮೋಶಿನ ಖೋಜಾ ಕಳೆದ 30 ವರ್ಷಗಳಿಂದ ಜಾರಕಿಹೊಳಿ ಕುಟುಂಬ ಮುಸ್ಲಿಂ ಸಮುದಾಯದದೊಂದಿಗೆ ಅವಿನಾಭಾವ ಸಂಬಂಧ ವಿದೆ, ಮುಸ್ಲಿಂ ಸಮುದಾಯದ ಅಭಿವೃದ್ಧಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಿ ಶ್ರಮಿಸುತ್ತಿದ್ದಾರೆ. ಇವರಿಗು ಸಮುದಾಯ ಸತತವಾಗಿ ಬೆಂಬಲಿಸುತ್ತಲೆ ಬಂದಿದೆ. ಈ ಬಾರಿಯು ಸುಳ್ಳು ವಂದತಿಗಳಿಗೆ ಕಿವಿಗೊಡದೆ ರಮೇಶ ಜಾರಕಿಹೊಳಿ ಅವರಿಗೆ ತಮ್ಮ ಮತ ನೀಡಬೇಕು.

ಯುವ ಸಮುದಾಯ ನಮ್ಮ ಹಾಗೂ ಜಾರಕಿಹೊಳಿ ಕುಟುಂಬದ ನಡುವಿನ ಸಂಬಂಧಕ್ಕೆ ಹೆಚ್ಚಿನ ಮಹತ್ವ ನೀಡಿ ಅವರನ್ನು ಬೆಂಬಲಿಸಬೇಕು. ಸಮಾಜದ ಮುಖಂಡರು ಮನೆ,ಮನೆಗೆ ತೆರಳಿ ಮಹಿಳೆಯರು ಸೇರಿದಂತೆ ಯುವ ಪೀಳಿಗೆಯ ಮನ ಒಲಿಸಿ ತಮ್ಮ ಮತವನ್ನು ಬಿಜೆಪಿ ಅಭ್ಯರ್ಥಿ ರಮೇಶ ಜಾರಕಿಹೊಳಿ ಅವರಿಗೆ ನೀಡಲು ಪ್ರೇರೇಪಿಸಿ ಈ ಬಾರಿಯ ಚುನಾವಣೆಯಲ್ಲಿ ರಮೇಶ ಜಾರಕಿಹೊಳಿ ಅವರು ಅತ್ಯಧಿಕ ಮತಗಳ ಅಂತರದಿಂದ ಆಯ್ಕೆಯಾಗುವಂತೆ ಆರ್ಶಿವದಿಸುವಂತೆ ಕೋರಿದರು.

ಈ ಸಂದರ್ಭದಲ್ಲಿ ಮುಖಂಡರುಗಳಾದ ಅಬ್ದುಲ ರಹೆಮಾನ ದೇಸಾಯಿ, ಕುತುಬ್ಬುದ್ದೀನ ಗೋಕಾಕ, ಎಂ ಜಿ ಮುಜವಾರ ಅತ್ತಾರ ಎಚ್ ಡಿ ಮುಲ್ಲಾ, ಜಾವೇದ್ ಗೋಕಾಕ, ರಿಯಾಜ ದೇಸಾಯಿ, ಮಲ್ಲಿಕ ಪೈಲವಾನ, ಇಲಾಹಿ ಖೈರದಿ, ಯೂಸುಫ್ ಅಂಕಲಗಿ, ದಾದಾಪೀರ ಶಾಬಾಶಖಾನ, ಬುಡ್ಡೇಸಾಬ ಶಾಬಾಶಖಾನ, ಕಾಶಿಮ ಖಲೀಫ, ಅಬ್ದುಲವಹಾಬ ಜಮಾದಾರ, ರಿಯಾಜ ಖತೀಫ, ಮುತ್ತಿ ಖಾಜಾಸಾಬ ಸುಳ್ಳೇಬಾವಿ, ಶರಪೋದ್ದೀನ ನರೋ, ರಾಜು ಅಂಡಗಿ, ಜುಬೇರ ತರಾಸಗಾರ, ಶೇರಖಾನ ಫನಿಬಂದ್, ಹುಸೇನ್ ಫನಿಬಂದ್, ಗಫಾರ ಖಾಗಜಿ, ಬಾಬು ಶೇಖಬಡೆ, ಇಮಾಮ ಬೋಜಗರ ಸೇ-ರಿದಂತೆ ಅನೇಕರು ಉಪಸ್ಥಿತರಿದ್ದರು.

# ನನಗೇ ಮೊದಲ ಸ್ಥಾನ ನೀಡಲು ಮತದಾರರ ನಿರ್ಧಾರ

## ಎರಡನೇ ಸ್ಥಾನಕ್ಕೆ ಯಾರು ಬರುತ್ತಾರೆಂದು ವಿರೋಧಿಗಳಿಬ್ಬರೂ ಪೈಪೋಟಿ ನಡೆಸಿದ್ದಾರೆ: ಬಾಲಚಂದ್ರ ಜಾರಕಿಹೊಳಿ

ಮೂಡಲಗಿ: ಕ್ಷೇತ್ರದ ಮತದಾರರು ಈಗಾಗಲೇ ನಿರ್ಧಾರ ಮಾಡಿದ್ದು, ನನಗೆ ಮೊದಲ ಸ್ಥಾನ ನೀಡಲಿದ್ದಾರೆ. ಆದರೆ, ವಿರೋಧ ಪಕ್ಷದ ಅಭ್ಯರ್ಥಿಗಳು ಎರಡನೇ ನಂಬರ್‌ಗೆ ಯಾರು ಬರುತ್ತಾರೆ ಎಂದು ಸ್ಪರ್ಧೆ ಮಾಡುತ್ತಿದ್ದಾರೆ. ಮೊದಲ ಸ್ಥಾನ ದೂರದ ಮಾತು. ನನ್ನನ್ನು ನೀವೇ ಮೊದಲ ಸ್ಥಾನದಲ್ಲಿ ಕೂರಿಸಿದ್ದಿರಿ. ನಾನು ಅದಕ್ಕೆ ಆಭಾರಿಯಾಗಿದ್ದೇನೆ. ತಾವೆಲ್ಲ 2ನೇ ಸ್ಥಾನದವರ ಬಗ್ಗೆ ತಲೆಕೆಡಿಸಿಕೊಳ್ಳಬಾರದು. ಮೊದಲ ಸ್ಥಾನದಲ್ಲಿದ್ದವರಿಗೆ ಮತ್ತೊಮ್ಮೆ ಅವಕಾಶ ಕಲ್ಪಿಸಬೇಕೆಂದು ಅರಬಾವಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಲಚಂದ್ರ ಜಾರಕಿಹೊಳಿ ಮನವಿ ಮಾಡಿದರು.

ಪಟ್ಟಣದಲ್ಲಿ ಸೋಮವಾರ ಅರಬಾವಿ ಮತಕ್ಷೇತ್ರದ ಬಿಜೆಪಿ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ವಿರೋಧಿಗಳು ಕರೆ ಮಾಡಿ ಮತ ಹಾಕುವಂತೆ ಕುಳಿತಲ್ಲೇ ಮನವಿ ಮಾಡುತ್ತಿದ್ದಾರೆ.

ಆದರೆ, ಅವರು ಮುಂದಿನ 5 ವರ್ಷಗಳಲ್ಲಿ ನಿಮ್ಮ ಕಷ್ಟ ಕಾಲದಲ್ಲಿ ನೆರವಾಗುತ್ತಾರಾ ಎಂದು ಪ್ರಶ್ನಿಸಿದ ಅವರು, ನಿಮ್ಮ ಮತ ತೆಗೆದುಕೊಂಡು ಅವರು ದೊಡ್ಡವರಾಗಲು ಹೊರಟಿದ್ದಾರೆ.

ಹೀಗಾಗಿ ಎಲ್ಲರೂ ವಿಚಾರ ಮಾಡಿ, ಯಾರಿಗೆ ಮತ ಹಾಕಿದರೆ ತಮಗೆ, ತಮ್ಮ ಕ್ಷೇತ್ರಕ್ಕೆ ಅನುಕೂಲ ಎಂಬುವುದನ್ನು ನಿರ್ಧರಿಸಿ.

ತಾವೆಲ್ಲ ಮೇ 10ರಂದು ನಡೆಯುವ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿರುವ ನನಗೇ ಮತ ಹಾಕಬೇಕು ಎಂದು ಮನವಿ ಮಾಡಿದರು.

ವಿರೋಧ ಪಕ್ಷದವರಿಗೆ ಈಗಾಗಲೇ ಸೋಲುತ್ತೇವೆಂದು ಗೊತ್ತಾಗಿ ಅಪಪ್ರಚಾರ ಮಾಡಲು ಮುಂದಾಗಿದ್ದರು. ಆದರೆ, ಅರಭಾವಿ ಮತಕ್ಷೇತ್ರ ಮತದಾರರು ಇಂತಹ ಅಪಪ್ರಚಾರಕ್ಕೆ ಕಿವಿಗೊಡಬಾರದು. ಮತಪ್ರಚಾರದಲ್ಲಿ ಹೆಚ್ಚು ಘಟಪ್ರಭಾ ಸಕ್ಕರೆ ಕಾರ್ಖಾನೆ ಬಗ್ಗೆ ಮಾತನಾಡಿದ್ದಾರೆ. ಆದರೆ, 1992ರಿಂದ ಘಟಪ್ರಭಾ ಸಕ್ಕರೆ ಕಾರ್ಖಾನೆ ಆಡಳಿತ ನಡೆಸುತ್ತ ಬಂದಿದ್ದು, ಇದರೊಂದಿಗೆ ಇದ್ದ ಸುಮಾರು ಕಾರ್ಖಾನೆಗಳು ಬಂದಾಗಿ ಕೀಲಿ ಹಾಕಿ ಖಾಸಗಿಯವರ ಕೈಯಲ್ಲಿ ಕೊಟ್ಟಿರುವುದು ನಿಮ್ಮ ಮುಂದೆಯೇ ಇದೆ. ವಿರೋಧ ಪಕ್ಷದವರು ಮಾಡುವ ಅಪಪ್ರಚಾರಕ್ಕೆ ಯಾರೂ ತಲೆ ಕೆಡಿಸಿಕೊಳ್ಳುವ ಅಗತ್ಯತೆ ಇಲ್ಲ ಎಂದರು.

**ಮೇ 13ರಂದು ಎಲ್ಲರೂ ಇತ್ತ ನೋಡಬೇಕು:**

ಮೇ 13ರಂದು ನಡೆಯುವ ಮತದಾನ ಎಣಿಕೆಯಂದು ಇಡೀ ಕರ್ನಾಟಕದ ಜನ ಅರಬಾವಿ ಕ್ಷೇತ್ರದತ್ತ ನೋಡುವಂತೆ ಮಾಡಬೇಕು. ಬಿಜೆಪಿ ಅಭ್ಯರ್ಥಿಗೆ ಇಷ್ಟೊಂದು ಮತ ಹಾಕಿ ಇತಿಹಾಸ ನಿರ್ಮಾಣ ಮಾಡಿದ್ದಾರೆಂದು ರಾಜ್ಯದ ಜನ ಇತ್ತ ಚಿತ್ತ ಹರಿಸಬೇಕು ಎಂದ ಅವರು, ಕೊರೋನಾ, ಪ್ರವಾಹ ಸೇರಿದಂತೆ ಕ್ಷೇತ್ರದಲ್ಲಿನ ಎಲ್ಲ ಜನರಿಗೂ ಸಹಾಯ ಮಾಡಿದ್ದೇನೆ. ಈ ಸಂದರ್ಭದಲ್ಲಿ ಯಾವುದೇ ಜಾತಿ ಧರ್ಮವನ್ನು ನೋಡಿಲ್ಲ.



ನಮ್ಮವರು, ತಮ್ಮವರು ಎಂದು ನೋಡಿಲ್ಲ.

ಎನ್‌ಎಸ್‌ಎಫ್ ಕಚೇರಿಗೆ ಬಂದಾಗ ಯಾರನ್ನೂ ಬರಿಗೈಲಿ ವಾಪಸ್ ಕಳಿಸಿಲ್ಲ. ಕೈಚಾಚಿ ಸಹಾಯ ಮಾಡಿದ್ದೇನೆ. ವಿರೋಧಿಗಳು ಯಾರಾದರೂ ಈ ರೀತಿಯ ಸಹಾಯ ಮಾಡಿದ್ದರೆ ಬಹಿರಂಗವಾಗಿ ಹೇಳಲಿ ಎಂದು ಸವಾಲು ಹಾಕಿದರು.

ವಿರೋಧಿಗಳು ಸದಾ ಅಪಪ್ರಚಾರದಲ್ಲಿ ತೊಡಗಿದ್ದಾರೆ. ಆದರೆ, ಯಾರೂ ಅವರ ಮಾತನ್ನು ಕೇಳೋಕೆ ಹೋಗಬೇಡಿ. ಮೇ 13ರಂದು ನಿಮ್ಮ ನಿಜರೂಪ ಹೊರಗೆ ಬರಲಿದೆ ಎಂದು ವಿರೋಧಿಗಳಿಗೆ ಟಾಂಗ್ ಕೊಟ್ಟ ಅವರು, ಮತದಾರರು ಈಗಾಗಲೇ ನಿರ್ಧಾರ ಮಾಡಿದ್ದು, ಬಿಜೆಪಿಯನ್ನು ಅತೀ ಹೆಚ್ಚು ಅಂತರದಿಂದ ಗೆಲ್ಲಿಸುವ ತೀರ್ಮಾನ ಕೈಗೊಂಡಿದ್ದಾರೆ ಆತ್ಮವಿಶ್ವಾಸದಿಂದ ನುಡಿದರು.

ನನ್ನನ್ನು ಗೆಲ್ಲಿಸುವ ಮೂಲಕ ಕ್ಷೇತ್ರದಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಅವಕಾಶ ಕಲ್ಪಿಸಬೇಕು.

ಈ ಮೂಲಕ ನಾನು ಶಕ್ತಿಮೀರಿ ನಾನು ಕೆಲಸ ಮಾಡುತ್ತೇನೆ ಎಂದ ಅವರು, ರಾಜ್ಯದ ಅಭಿವೃದ್ಧಿ ನಿಟ್ಟಿನಲ್ಲಿ ಪ್ರಧಾನಿ ಆದಿಯಾಗಿ ಎಲ್ಲರೂ ಶ್ರಮಿಸುತ್ತಿದ್ದೇವೆ. ಈ ಮೂಲಕ ಕರ್ನಾಟಕದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದು ಕ್ಷೇತ್ರವನ್ನು, ರಾಜ್ಯವನ್ನು ಮತ್ತಷ್ಟು ಅಭಿವೃದ್ಧಿ ಮಾಡೋಣ ಎಂದರು.

ರಾಮಲಿಂಗೇಶ್ವರ ಏತ ನೀರಾವರಿ ಸೇರಿದಂತೆ ಹತ್ತಾರು ನೀರಾವರಿ ಯೋಜನೆಗಳನ್ನು ಜಾರಿಗೆ ತರಬೇಕೆಂದು ನಾವು ಎಂಎಲ್‌ಎ ಆಗುತ್ತಿದ್ದೇವೆ. ಅದನ್ನು ಬಿಟ್ಟು ಯಾರನ್ನೋ ಟೀಕೆ, ಟಿಪ್ಪಣೆ ಮಾಡಬೇಕು, ಅಪಪ್ರಚಾರ ಮಾಡಬೇಕೆಂದು ಚುನಾವಣೆ ಮಾಡುತ್ತಿಲ್ಲ ಎಂದು ವಿರೋಧ ಪಕ್ಷದವರಿಗೆ ಟಾಂಗ್ ನೀಡಿದರು.

ಕಳೆದ 2004 ರಿಂದ ಚುನಾವಣೆ ಕೊನೆಯ ಪ್ರಚಾರ ಸಭೆಯನ್ನು ಬಸವ ಮಂಟಪದಲ್ಲಿ ಮಾಡುತ್ತ ಬಂದಿದ್ದು, ಇಲ್ಲಿ ಯಾರು ಪ್ರಚಾರದ ಕೊನೆಯ ಸಭೆ ಮಾಡುತ್ತಾರೆ ಅವರಿಗೆ ಗೆಲುವು ಖಚಿತ ಎನ್ನುವುದು ಎಲ್ಲರಿಗೆ ಗೊತ್ತು. ಅದರಿಂದಲೇ ವಿರೋಧ ಪಕ್ಷದವರು ತಹಸೀಲ್ದಾರ್ ಕಚೇರಿಯಲ್ಲಿ ಈ ಮಂಟಪದಲ್ಲಿ ಕೊನೆಯ ಪ್ರಚಾರ ಸಭೆಗಾಗಿ ಅನುಮತಿ ಪಡೆದುಕೊಂಡಿದ್ದರು. ಆದರೆ, ಚುನಾವಣೆಯ ಕೊನೆ ದಿನ ಮೇ 8 ಎಂದು ಗೊತ್ತಾಗಿದ್ದು, ವಿರೋಧ ಪಕ್ಷದವರು ಮೇ 7ರಂದು ತೆಗೆದುಕೊಂಡಿದ್ದರು. ದೇವರ ದಯದಿಂದ ಮೇ 8ರಂದು ಸಂಜೆ 4ರಿಂದ 6ರವರೆಗೆ ನಮಗೆ ಅನುಮತಿ ಸಿಕ್ಕಿದೆ ಎಂದರು.

ಬಹಳ ಕಡೆ ಹಳ್ಳಿಯಲ್ಲಿ ಪ್ರಚಾರ ಮಾಡಲು ಆಗಲಿಲ್ಲ. ಆದರೆ, ಜನವರಿ, ಫೆಬ್ರುವರಿ, ಮಾರ್ಚ್‌ನಲ್ಲಿ ಸತತವಾಗಿ ಎಲ್ಲ ಸಮಾಜದ ಸಭೆ ಮಾಡಿದ್ದೇವೆ. ಬಿಜೆಪಿ ಕಾರ್ಯಕ್ರಮ ಮಾಡಿದ್ದೇವೆ.

3 ತಿಂಗಳಲ್ಲಿ ಸಾಕಷ್ಟು ಕಾರ್ಯಕ್ರಮ ಮಾಡಿ ಹೆಚ್ಚುಕಮ್ಮಿ ಪ್ರಚಾರವನ್ನು ಅಲ್ಲಿಗೆ ನಿಲ್ಲಿಸಿದ್ದೆವು. ಅದಾದ ನಂತರ ಎಲ್ಲ ಮುಖಂಡರನ್ನು ಕರೆದು ಸಭೆ ಮಾಡಿ ಬಿಸಿಲು ಹೆಚ್ಚು ಇರುವುದರಿಂದ ಸಭೆ ಸಮಾರಂಭಗಳನ್ನು ಮಾಡುವುದು ಬೇಡ ಎಂದು ನಿರ್ಧರಿಸಿ ಬೂತ್‌ಮಟ್ಟದಲ್ಲಿ ಕಮಿಟಿ ಮಾಡಿಕೊಂಡು ಮನೆ ಮನೆಗೆ ಹೋಗಿ ಪ್ರಚಾರ ಮುಂದುವರೆಸಿದ್ದೇವೆ ಎಂದು ಹೇಳಿದರು.

ಮುಖಂಡರ ಹಾಗೂ ಕಾರ್ಯಕರ್ತರ ಪ್ರಚಾರ ಮೂಲಕ ಮತಯಾಚನೆ ಮಾಡಲಾಗಿದೆ. ದಯಮಾಡಿ ಯಾರು ತಪ್ಪು ತಿಳಿದುಕೊಳ್ಳಬಾರದು.

ಮೇ 13ರ ನಂತರ ನಿಮ್ಮ ಹಳ್ಳಿಯಲ್ಲಿಯೇ ವಿಜಯೋತ್ಸವ ಆಚರಿಸಲಾಗುವುದು ಎಂದು ಭರವಸೆ ನೀಡಿದರು.

ವೀರಶೈವ ಲಿಂಗಾಯತ ಸೇರಿದಂತೆ ಸರ್ವ ಸಮುದಾಯದ ಜನರನ್ನು ತೆಗೆದುಕೊಂಡು ಕ್ಷೇತ್ರದ ಅಭಿವೃದ್ಧಿ ಮಾಡಲಾಗುವುದು. ಸರ್ವ ಜನಾಂಗದ ಶಾಂತಿ ತೋಟ ಅರಭಾವಿ ಮತಕ್ಷೇತ್ರ ಎನ್ನುವುದು ಮೇ.13ರಂದು ಗೊತ್ತಾಗಲಿದೆ ಎಂದು ತಿಳಿಸಿದರು.

ಶೈಕ್ಷಣಿಕ ಕ್ಷೇತ್ರದಲ್ಲಿ ಹತ್ತಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ ಪರಿಣಾಮ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ರಾಜ್ಯದಲ್ಲಿ ಚಿಕ್ಕೋಡಿ ಶೈಕ್ಷಣಿಕ ವಿಭಾಗಕ್ಕೆ 12ನೇ ಸ್ಥಾನ ಬಂದರೆ, ಇದೇ ವಿಭಾಗದಲ್ಲಿ ಮೂಡಲಗಿ ತಾಲೂಕಿಗೆ ಮೊದಲ ಸ್ಥಾನ ಬಂದಿದೆ ಎಂದು ಹೇಳಿದರು.

ಸಭೆಯಲ್ಲಿ ಸರ್ವೋತ್ತಮ ಜಾರಕಿಹೊಳಿ, ಮಹಾದೇವ ಶಕ್ಕಿ, ಹನಮಂತ ಗುಡ್ಲಮನಿ, ಬಸವಪ್ರಭು ನಿಡಗುಂದಿ, ರವಿ ಸೋನವಾಲ್ಕರ, ಸುಭಾಸ ಡವಳೇಶ್ವರ, ಬಾಬು ಸೋನವಾಲ್ಕರ, ಪ್ರಕಾಶ ಮಾದರ, ಅಪ್ಪಾಸಾಬ ಹೊಸಕೋಟೆ, ರಮೇಶ ಸಣ್ಣಕ್ಕಿ, ಅಜೀಜ ಡಾಂಗೆ, ಬಿ.ಎಚ್.ಸೋನವಾಲ್ಕರ, ರುದ್ರಪ್ಪ ವಾಲಿ, ಮಹಾದೇವ ಗೋಕಾಕ, ಕೆ.ಬಿ.ಪಾಟೀಲ, ರಾಮಣ್ಣಾ ಹಂದಿಗುಂದ, ಅನ್ವರ ನದಾಫ, ಸೇರಿದಂತೆ ಇತರರು ಇದ್ದರು.

## ಮದ್ಯ ಮಾರಾಟ ಬಂದ್



ಬೆಂಗಳೂರು: ಕರ್ನಾಟಕ ವಿಧಾನಸಭಾ ಚುನಾವಣಾ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಮೂರು–ನಾಲ್ಕು ದಿನ ಮದ್ಯ ಮಾರಾಟ ನಿಷೇಧಿಸಲಾಗಿದೆ. ಈ ಕುರಿತು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಪ್ರತ್ಯೇಕವಾಗಿ ಅಧಿಕೃತ ಆದೇಶವನ್ನು ಹೊರಡಿಸಿದ್ದಾರೆ. ರಾಜ್ಯಾದ್ಯಂತ ಬಾರ್ ಗಳು ಬಂದ್ ಆಗಿರಲಿದ್ದು, ಮೇ 11ರ ಬೆಳಿಗ್ಗೆ 6ರವೆಗೆ ಎಲ್ಲಿಯೂ ಮದ್ಯ ಸಿಗುವುದಿಲ್ಲ. ಚುನಾವಣಾ ಫಲಿತಾಂಶದ ದಿನವಾದ ಮೇ 13ರ ಬೆಳಿಗ್ಗೆ 6 ಗಂಟೆಯಿಂದ ಮೇ 14ರ ಬೆಳಿಗ್ಗೆ 6ರವರೆಗೆ ಬಾರ್‌ಗಳು ಬಂದ್ ಇರಲಿವೆ. ಈ ದಿನಗಳಂದು ಮದ್ಯ ಮಾರಾಟಕ್ಕೆ ಕಡಿವಾಣ ಹಾಕುವಂತೆ ರಾಜ್ಯ ಸರ್ಕಾರಕ್ಕೆ ಆಯೋಗವು ಸೂಚನೆಯನ್ನು ನೀಡಿದೆ.

ಮತದಾನದ ದಿನ ಮತ್ತು ಮತ ಎಣಿಕೆ ದಿನಗಳನ್ನು ಶುಷ್ಕ ದಿನ ಎಂದು ಘೋಷಿಸಲಾಗಿದ್ದು, ಈ ದಿನದಂದು ಮದ್ಯ ತಯಾರಿಕೆ, ಮಾರಾಟ ಹಾಗೂ ಸಾಗಾಟವನ್ನು ನಿಷೇಧಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಇಂದು ಮದ್ಯದಂಗಡಿಗಳಲ್ಲಿ ಭರ್ಜರಿ ವ್ಯಾಪಾರ ವಹಿವಾಟು ನಡೆಯುವ ಸಾಧ್ಯತೆಯಿದ್ದು, ಎಲ್ಲೆಡೆ ಭಾರಿ ಬೇಡಿಕೆ ಎದುರಾಗಿದೆ. ಅಲ್ಲಲ್ಲಿ ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆ ಪಡೆದು ಮದ್ಯವನ್ನು ಮಾರಾಟ ಮಾಡಲಾಗುತ್ತಿದೆ.

ಈಗಾಗಲೇ ಹಲವರು ಕೊಟ್ಯಂತರ ರೂಪಾಯಿಯ ಮದ್ಯವನ್ನು ಖರೀದಿಸಿ ಸಂಗ್ರಹಿಸಿಟ್ಟಿದ್ದು, ಈ ದಿನಗಳಂದು ದುಪ್ಪಟ್ಟು ಬೆಲೆಗೆ ಮಾರಾಟ ಮಾಡಲು ಯೋಜಿಸಿದ್ದಾರೆ. ಜತೆಗೆ ಮತದಾರರಿಗೆ ಆಮಿಷವೊಡ್ಡಲು ಹಲವು ರಾಜಕೀಯ ನಾಯಕರು ಈಗಾಗಲೇ ಮದ್ಯ ಸಂಗ್ರಹಿಸಿಟ್ಟಿದ್ದಾರೆ ಎನ್ನುವ ಆರೋಪಗಳಿವೆ.

## ಚುನಾವಣೆಗೆ 3187 ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ನಿಯೋಜನೆ: ಎಸ್ಪಿ ಯಶೋಧಾ ವಂಟಗೋಡಿ

ಕೊಪ್ಪಳ : ಕರ್ನಾಟಕ ವಿಧಾನಸಭಾ ಚುನಾವಣೆ–2023 ಹಿನ್ನೆಲೆಯಲ್ಲಿ ಜಿಲ್ಲೆಯ 05 ವಿಧಾನಸಭಾ ಕ್ಷೇತ್ರಗಳಲ್ಲಿ ಮತ್ತು 1322 ಮತಗಟ್ಟೆಗಳಲ್ಲಿ ಮೇ–10 ರಂದು ಮತದಾನವು ಶಾಂತಿಯುತವಾಗಿ ನಡೆಯುವ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮವಾಗಿ ಕೇಂದ್ರೀಯ ಮೀಸಲು ಪಡೆ ಸೇರಿದಂತೆ ಜಿಲ್ಲಾ ಪೊಲೀಸ್ ಇಲಾಖೆಯಿಂದ ಒಟ್ಟು 3187 ಮತು ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ ಅವರು ತಿಳಿಸಿದರು.

ಮೇ–8 ರಂದು ಜಿಲ್ಲಾಡಳತ ಭವನದ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಚುನಾವಣಾ ಕಾರ್ಯಕ್ಕಾಗಿ ಕೊಪ್ಪಳ ಜಿಲ್ಲೆಯಲ್ಲಿ ಲಭ್ಯವಿರುವಂತ 02–ಡಿಎಸ್‌ಪಿ, 12–ಸಿಪಿಐ/ಪಿ.ಐ, 43 ಪಿಎಸ್‌ಐ, 115 ಎಎಸ್‌ಐ, 620 ಪೊಲೀಸ್ ಸಿಬ್ಬಂದಿಗಳು ಮತ್ತು 500 ಜನ ಗೃಹ ರಕ್ಷಕ ದಳ ಸಿಬ್ಬಂದಿಯವರನ್ನು ನಿಯೋಜಿಸಲಾಗಿದೆ.

ಕೊರತೆಯನ್ನು ಸಲಪಡಿಸಲು ಮತ್ತು ಹೆಚ್ಚಿನ ರೀತಿಯಲ್ಲಿ ಭದ್ರತೆಯನ್ನು ಒದಗಿಸುವ ನಿಟ್ಟಿನಲ್ಲಿ ಕೋರಿಕೆಯಂತೆ ರಾಜ್ಯದ ಇತರೆ ಜಿಲ್ಲೆಗಳಿಂದ ಒಬ್ಬರು ಎಸ್ಪಿ, 3 ಡಿ.ಎಸ್.ಪಿ, 5 ಸಿಪಿಐ/ಪಿ.ಐ. ಮತ್ತು ಹೊರ ರಾಜ್ಯದಿಂದ (ಆಂಧ್ರಪ್ರದೇಶ) 300 ಜನ ಪೊಲೀಸ್ ಸಿಬ್ಬಂದಿಗಳು ಮತ್ತು 300 ಜನ ಗೃಹ ರಕ್ಷಕ ದಳ ಸಿಬ್ಬಂದಿ ಸೇರಿ ಒಟ್ಟು 600 ಜನ ಜಿಲ್ಲೆಗೆ ಆಗಮಿಸಿರುತ್ತಾರೆ.

ಕೊಪ್ಪಳ ಜಿಲ್ಲೆಯ 05 ವಿಧಾನಸಭಾ ಕ್ಷೇತ್ರಗಳಿಗೆ ತಲಾ ಒಂದೊಂದು ಕೆಎಸ್‌ಆರ್ಪಿ ಪಡೆಗಳನ್ನು ನಿಯೋಜನೆ ಮಾಡಲಾಗಿದೆ. ಕೇಂದ್ರೀಯ ಮೀಸಲು ಪಡೆಯ ಒಟ್ಟು 16 ತುಕಡಿಗಳಿಂದ ಒಟ್ಟು 1152 ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಪ್ರತಿ ವಿಧಾನಸಭಾ ಕ್ಷೇತ್ರದ ಭದ್ರತಾ ಮೇಲ್ವಿಚಾರಣೆಗಾಗಿ ತಲಾ ಒಬ್ಬರು ಡಿಎಸ್ಪಿಗಳನ್ನು, ಸಹಾಯಕರಾಗಿ ತಲಾ 3 ಜನ ಸಿಪಿಐ ರವರನ್ನು ನಿಯೋಜನೆ ಮಾಡಲಾಗಿದೆ. ಇದಲ್ಲದೆ ಡಿ.ಎಸ್.ಪಿ ಮತ್ತು ಸಿ.ಪಿ.ಐ ರವರ ಅಧೀನದಲ್ಲಿ ಒಟ್ಟು 70 ಪಿಎಸ್‌ಐ/ಎಎಸ್‌ಐ ರವರನ್ನು ಸೆಕ್ಟರ್ ಮೊಬೈಲ್ ಕರ್ತವ್ಯಕ್ಕೆ ನಿಯೋಜಿಸಲಾಗಿದೆ.



ಕೊಪ್ಪಳ ಜಿಲ್ಲೆಯಲ್ಲಿ ಲಭ್ಯವಿರುವ 1292 ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಹಾಗೂ ಹೊರಗಡೆಯಿಂದ ಬಂದಿರುವ 09 ಜನ ಪೊಲೀಸ್ ಅಧಿಕಾರಿಗಳು, 500 ಜನ ಜಿಲ್ಲೆಯ ಗೃಹ ರಕ್ಷಕ ದಳ ಸಿಬ್ಬಂದಿ, 5 ಕೆಎಸ್‌ಆರ್ಪಿ ತುಕಡಿಗಳು, 18 ಕೇಂದ್ರ ಮೀಸಲು ಪೊಲೀಸ್ ತುಕಡಿ, ಆಂಧ್ರಪ್ರದೇಶ ರಾಜ್ಯದ 300 ಜನ ಪೊಲೀಸ್ ಸಿಬ್ಬಂದಿ ಹಾಗೂ 300 ಜನ ಗೃಹ ರಕ್ಷಕ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜಿಸಿದೆ.

108 ಜನ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರನ್ನು 38 ಫ್ಲಾಯಿಂಗ್ ಸ್ಕ್ವಾಡ್‌ಗಳ ಕರ್ತವ್ಯಕ್ಕೆ, 78 ಜನ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರನ್ನು 15 ಚೆಕ್‌ಪೋಸ್ಟ್‌ಗಳ ಕರ್ತವ್ಯಕ್ಕೆ, 15 ಜನ ಸಿಬ್ಬಂದಿಯವರನ್ನು ವಿಡಿಯೋ ಸರ್ವೆಲೆನ್ಸ್ ಟೀಮ್ ಕರ್ತವ್ಯಕ್ಕೆ, 107 ಜನ ಪೊಲೀಸ್ ಅಧಿಕಾಲ/ಸಿಬ್ಬಂದಿಯವರನ್ನು ಕಂದಾಯ ಇಲಾಖೆ ಸೆಕ್ಟರ್ ಮೊಬೈಲ್‌ಗಳ ಕರ್ತವ್ಯಕ್ಕೆ ನಿಯೋಜಿಸಿದೆ.

ಒಟ್ಟಾರೆ ಜಿಲ್ಲೆಯ, ಹೊರ ಜಿಲ್ಲೆಯ ಹಾಗೂ ಹೊರ ರಾಜ್ಯದ ಪೊಲೀಸ್ ಅಧಿಕಾಲ/ಸಿಬ್ಬಂದಿ, ಗೃಹ ರಕ್ಷಕ ದಳ ಸಿಬ್ಬಂದಿ, ಕೇಂದ್ರೀಯ ಮೀಸಲು ಪಡೆ, ರಾಜ್ಯ ಮೀಸಲು ಪಡೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಸೇರಿ ಒಟ್ಟು 3187 ಜನರನ್ನು ಮುಕ್ತ, ನ್ಯಾಯಸಮ್ಮತ, ಶಾಂತಿಯುತ ಚುನಾವಣೆಗಾಗಿ ಭದ್ರತಾ ಕರ್ತವ್ಯಕ್ಕೆ ನಿಯೋಜಿಸಿದೆ.

ಸಾರ್ವಜನಿಕರು ನಿರ್ಭಯವಾಗಿ ಮತದಾನ ಮಾಡಲು ಅನುಕೂಲವಾಗುವಂತೆ ಜಿಲ್ಲೆಯ ಒಟ್ಟು 225 ಪ್ರದೇಶ ವ್ಯಾಪ್ತಿಯಲ್ಲಿ ಬರುವ 500 ಮತಗಟ್ಟೆಗಳಿಗೆ ಕೇಂದ್ರೀಯ ಮೀಸಲು ಪಡೆಯ ಸಿಬ್ಬಂದಿಯವರನ್ನು ನಿಯೋಜಿಸಿದೆ.

ಮಾದರಿ ನೀತಿ ಸಂಹಿತೆ ಜಾರಿ ನಂತರದಿಂದ ಮೇ–7 ರವರೆಗೆ ಜಿಲ್ಲೆಯ ನಗರ, ಪಟ್ಟಣ ಮತು ಗ್ರಾಮೀಣ ಪ್ರದೇಶಗಳು ಸೇರಿದಂತೆ ಒಟ್ಟು 223 ಸ್ಥಳಗಳಲ್ಲಿ ಪಥಸಂಚಲನ (ರೂಟ್ ಮಾರ್ಚ) ಮಾಡಲಾಗಿದೆ.

ಮಾದರಿ ನೀತಿ ಸಂಹಿತೆ ಉಲ್ಲಂಘನೆಗೆ ಸಂಬಂಧಿಸಿದಂತೆ ಇದುವರೆಗೆ 34 ಪ್ರಕರಣಗಳು ದಾಖಲಾಗಿದ್ದು, ನೀತಿ ಸಂಹಿತೆ ಜಾರಿ ನಂತರ ಚುನಾವಣಾ ಅಕ್ರಮಗಳನ್ನು ತಡೆಗಟ್ಟಲು ಕಾರ್ಯಾಚರಣೆ ಕೈಗೊಂಡು ನಗದು ಸೇರಿ ಕೋಟ್ಯಾಂತರ ರೂ ಮೌಲ್ಯದ ಮದ್ಯ, ಮಾಧಕ ದ್ರವ್ಯ ಹಾಗೂ ಇನ್ನಿತರೆ ಸಾಮಗ್ರಿಗಳನ್ನು ವಶಪಡಿಸಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ವಿವರಿಸಿದರು.


ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ಎಂ. ಸುಂದರೇಶಬಾಬು, ಜಿಲ್ಲಾ ಪಂಚಾಯತ್ ಸಿಇಓ ರಾಹುಲ್ ರತ್ನಂ ಪಾಂಡೆಯ, ಅಪರ ಜಿಲ್ಲಾಧಿಕಾರಿ ಸಾವಿತ್ರಿ ಕಡಿ ಹಾಗೂ ಇತರರು ಇದ್ದರು.

## ಹತ್ತಿ ಮಾರುಕಟ್ಟೆ ಬಂದ; ರೈತರಿಗೆ ದೊಡ್ಡ ಮೋಸ: ಬಿ.ಎಂ.ಚಿಕ್ಕನಗೌಡರ

ಬೈಲಹೊಂಗಲ : ದಕ್ಷಿಣ ಭಾರತದಲ್ಲಿ ಪ್ರಸಿದ್ಧಿ ಹೊಂದಿದ ಬೈಲಹೊಂಗಲ ಎಪಿಎಂಸಿ ಬಂದ್ ಆಗಿರುವುದಕ್ಕೆ ಖಾಸಗಿ ಹತ್ತಿ ಖರೀದಾರರು ಕಾರಣರಾಗಿದ್ದಾರೆಂದು ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಬಿ.ಎಂ. ಚಿಕ್ಕನಗೌಡರ ಆರೋಪಿಸಿದರು.

ಪಟ್ಟಣದಲ್ಲಿ ವಿಡಿಯೋ ಹೇಳಿಕೆ ಬಿಡುಗಡೆ ಮಾಡಿ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

ಆನಿಗೋಳದ ದಿ.ಅಣ್ಣಾಸಾಹೇಬ ಪಾಟೀಲರು ಮಾರುಕಟ್ಟೆ ಅಭಿವೃದ್ಧಿಗೆ ತುಂಬಾ ಶ್ರಮಿಸಿದ್ದರು. ತೂಕದಲ್ಲಿ, ದರದಲ್ಲಿ ಮೋಸವಾಗದಂತೆ ಕ್ರಮ ಕೈಕೊಂಡಿದ್ದರು. ಹದಿನೈದು ವರ್ಷಗಳಿಂದ ಬಂದ್ ಆಗಲು ಯಾರು ಕಾರಣರೆಂದು ಎಲ್ಲರಿಗೂ ತಿಳಿದಿದೆ. ದಲಾಲಿ ವರ್ತಕರು, ಕಾರ್ಮಿಕರು, ಕಾರಕೂನರು ಸೇರಿದಂತೆ ಎರಡು ಸಾವಿರ ಕುಟುಂಬಗಳನ್ನು



ಬೀದಿ ಪಾಲು ಮಾಡಲಾಗಿದೆ. ಕೈಯಲ್ಲಿ ಹಣ ಕೊಡುತ್ತೇವೆಂದು ಮೋಸ ಮಾಡಲಾಗುತ್ತಿದೆ ಎಂದರು. ಬಿಜೆಪಿ ಅಭ್ಯರ್ಥಿ ಜಗದೀಶ ಮೆಟಗುಡ್ಡ ಅವರು ಅಧಿಕಾರದಲ್ಲಿ ಇದ್ದಾಗ ಈ ಬಗ್ಗೆ ಯಾವುದೇ ಕಾಳಜಿ ಮಾಡಿಲ್ಲ. ಇಂದು ರೈತರು, ವರ್ತಕರು, ಕಾರ್ಮಿಕರು, ಕಾರಕೂನರು ನೋವು ಅನುಭವಿಸುತ್ತಿದ್ದಾರೆಂದರು.

ಶಾಸಕ ಮಹಾಂತೇಶ ಕೌಜಲಗಿ ಅವರು ದೊಡ್ಡ ಕೆರೆ ಒತ್ತುವರಿ ಬಗ್ಗೆ ಲಕ್ಷ ಹರಿಸಿಲ್ಲ. 27 ಎಕರೆ ಕರೆಯಲ್ಲಿ 18 ಎಕರೆ ಮಾತ್ರ ಉಳಿದಿದೆ. ಖಾಸಗಿ ಕಲ್ಯಾಣ ಮಂಟಪದವರ ಒತ್ತುವರಿ ಬಗ್ಗೆ ಮೌನವಹಿಸಿದ್ದಾರೆಂದು ಆರೋಪಿಸಿದರು. ಈ ಅನ್ಯಾಯಗಳ ವಿರುದ್ಧ ನಾಗರಿಕರು ಅವರಿಗೆ ತಕ್ಕಪಾಠ ಕಲಿಸಬೇಕು. ಭ್ರಷ್ಟರ ವಿರೋಧಿ ಆಗಿರುವ ಆಮ್ ಆದ್ಮಿಗೆ ಮತ ನೀಡಿ ಶಕ್ತಿ ನೀಡಬೇಕೆಂದು ಕೇಳಿಕೊಂಡರು. ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

## ಎಂ.ಪಿ. ರೇಣುಕಾಚಾರ್ಯರ ಪರ ಮತ ಯಾಚನೆ

ಹೊನ್ನಾಳಿ: ಬಿಜೆಪಿ ಪರ ಮತಯಾಚಿಸಿದ ವಿಶ್ವಕರ್ಮ ಮುಖಂಡರು ಹಾಗೂ ಎಂ.ಪಿ. ರೇಣುಕಾಚಾರ್ಯರ ಕ್ಷೇತ್ರದಲ್ಲಿ ವಿಧಾನಸಭೆ ಚುನಾವಣೆ ಹಿನ್ನಲೆ ಪ್ರಚಾರ ಬಲು ಜೋರಾಗಿ ನಡೆದಿದೆ ಆದರೆ ವಿಶೇಷವಾಗಿ ವಿಶ್ವಕರ್ಮ ಸಮಾಜದವರು ಎಂ.ಪಿ. ರೇಣುಕಾಚಾರ್ಯರಯವರ ಪರ ಮತ ಯಾಚನೆ ಮಾಡಿದ್ದಾರೆ.

ಎಂ.ಪಿ. ರೇಣುಕಾಚಾರ್ಯರು ಮಾಡಿದ ಅಪಾರ ಅಭಿವೃದ್ಧಿ ಕೆಲಸ ಮರೆಯಲಾರದಷ್ಟಿದೆ ವಿಶ್ವಕರ್ಮರಿಗೆ ಹಲವು ಯೋಜನೆಗಳನ್ನ ಜಾರಿ ತಂದು ವಿಶ್ವಕರ್ಮರಿಗೆ ವಿಶೆಷ ಕೊಡುಗೆಯಾಗಿದೆ. ಹಿಂದುಳಿದ ಜನಾಂಗವನ್ನ ಮೇಲೆತ್ತಿ



ಹಿಡಿದ ಏಕೈಕ ರಾಜಕೀಯ ಕಾರ್ಯದರ್ಶಿ ಶ್ರೀ. ಎಂ.ಪಿ. ರೇಣುಕಾಚಾರ್ಯರು ಎಂದು ಸಭೆ ಹಾಗೂ ಮತಯಾಚಿಸುವ ಮೂಲಕ ವಿಶ್ವಕರ್ಮ ಸಮಾಜದ ಬಾಬು ಪತ್ತಾರ ಹಾಗೂ ಮತಯಾಚನೆ ತಂಡದ ಮುಖ್ಯಸ್ಥರಾಗಿ ಸಂತೋಷ ಪತ್ತಾರ, ಉತ್ತರ ಕರ್ನಾಟಕ ವಿಶ್ವಕರ್ಮ ಸಮಾಜದ ಅಧ್ಯಕ್ಷರಾದ ಉಮೇಶ ಪತ್ತಾರ, ಧರ್ಮವೀರ ಸಿಂಗ್, ಬಿಜೆಪಿ ಯುವ ಮೊರ್ಚಾ ಬೆಂಗಳೂರು ಸೌಥ, ಹಾಗೂ ಇನ್ನಿತರ ಗಣ್ಯ ವ್ಯಕ್ತಿಗಳು ಬಿಜೆಪಿ ಪರ ಮತಯಾಚಿಸಿ ಎಂ.ಪಿ. ರೇಣುಕಾಚಾರ್ಯರಿಗೆ ಅಪೂರ್ವ ಬೆಂಬಲ ನೀಡಿ ಜೈ ಅಂದಿದ್ದಾರೆ.

## ಪಕ್ಷೇತರ ಅಭ್ಯರ್ಥಿ ಡಾ.ವಿಶ್ವನಾಥ ಪಾಟೀಲ ಭರವಸೆ ಪತ್ರ ಬಿಡುಗಡೆ



ಬೈಲಹೊಂಗಲ : ಎಲ್ಲ ಜಾತಿಯ ರೈತರ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಸ್ವಂತವಾಗಿ ಮತ್ತು ಗೆಳೆಯರು ಕೂಡಿಕೊಂಡು ಒಂದು ಕೋಟಿ ರೂ. ಐದು ವರ್ಷಗಳ ಅವಧಿಯಲ್ಲಿ ಒದಗಿಸುವುದಾಗಿ ಪಕ್ಷೇತರ ಅಭ್ಯರ್ಥಿ, ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ಹೇಳಿದರು.

ಪಟ್ಟಣದ ತಮ್ಮ ಕಾರ್ಯಾಲಯದಲ್ಲಿ ಭರವಸೆ ಪತ್ರ ಬಿಡುಗಡೆ ಮಾಡಿ ಮಾತನಾಡಿದ ಅವರು, ನಾಡಿಗೆ ಒಳಿತಾಗುವ ಹಲವಾರು ವಿಚಾರಗಳನ್ನು ಭರವಸೆ ಪತ್ರದಲ್ಲಿ ಹಂಚಿಕೊಂಡಿದ್ದಾರೆ. ಬೈಲಹೊಂಗಲ ನಾಡಿನ ಯುವ ಜನತೆಯ, ರೈತರ, ಸ್ವಾಭಿಮಾನದ ಹೆಗ್ಗುರುತಾಗಿ ಭರವಸೆ ಪತ್ರ ಬಂದಿದೆ.

ಪ್ರತಿಯೊಬ್ಬರು ಹತ್ತು ನಿಮಿಷ ಸಮಯ ಮೀಸಲಿಟ್ಟು ಓದಬೇಕೆಂದು ವಿನಂತಿಸಿದರು. ಯಾರ ಬಗ್ಗೆಯೂ ನಮಗೆ ಕೆಟ್ಟ ಭಾವನೆ ಇಲ್ಲ. ಆದರೆ ಒಳಗೊಳಗೆ ನಡೆಯುತ್ತಿರುವ ಸಂಚುಗಳು, ಒಳಒಪ್ಪಂದಗಳು ಮುಂದಿನ ಪೀಳಿಗೆಯ ಮೇಲೆ ಆಗುವ ಪರಿಣಾಮಗಳನ್ನು ಭರವಸೆ ಪತ್ರದಲ್ಲಿ ತಿಳಿಸಿದ್ದೇನೆ.

ಭರವಸೆ ಪತ್ರ ಅಂದರೆ ಅಭಿವೃದ್ಧಿ ಜತೆಗೆ ನಾಡಿನ ಅಸ್ಮಿತೆ, ಶಾಂತಿ, ಸೌಹಾರ್ದತೆ, ಜನರ ಸುಖ–ಸಂತೋಷ ಎಲ್ಲವನ್ನು ಒಳಗೊಂಡಿರುತ್ತದೆ. ಅಂತಹ ವಿಚಾರಗಳನ್ನು ತಮ್ಮ ಮುಂದೆ ತೆರೆದಿಟ್ಟಿದ್ದೇನೆ.

ನನ್ನ ಅವಧಿಯಲ್ಲಿ ನಾನು ಹಣಕ್ಕೆ ಆಸೆ ಪಡದೆ ಇರುವುದರಿಂದ ದೊಡ್ಡ ಯೋಜನೆಗಳು ಈ ನಾಡಿಗೆ ದೊರೆತಿವೆ. ಮುಂದೆಯೂ ಅಭಿವೃದ್ಧಿಗೆ ಅನುಕೂಲವಾಗಲಿದೆ. ಪ್ರಚಾರಗಳ ಭರಾಟೆಗಳಿಗೆ ಮರುಳಾಗಬಾರದು. ಸ್ವಾಭಿಮಾನಕ್ಕೆ ಶಕ್ತಿ ನೀಡಬೇಕೆಂದು ಕೇಳಿಕೊಳ್ಳುವೆ.

ಅನುಕ್ರಮ ಸಂಖ್ಯೆ 9 ಮತ್ತು ಕಬ್ಬು ಜೊತೆಗಿರುವ ರೈತನ ಚಿತ್ರ ದೊರೆತಿದ್ದು ಶುಭ ಲಕ್ಷಣವಾಗಿದೆ. ಶೂರರ ನಾಡಿನಲ್ಲಿ ಸ್ವಾಭಿಮಾನದ ಅಸ್ಮಿತೆ ಪ್ರಜ್ವಲಿಸುವಂತೆ ಮಾಡಬೇಕೆಂದು ನಾಡಿನ ನಾಗರಿಕರಲ್ಲಿ ವಿನಂತಿಸಿದರು.

## ವಿಶ್ವಕರ್ಮರಿಗೆ ವಿಶೆಷ ಕೊಡುಗೆ




ಬಂಟ್ವಾಳ: ಪೂರ್ಣಿಮಾ ಶ್ರೀನಿವಾಸ್ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಬಿಜೆಪಿ ಪರ ಮತಯಾಚಿಸಿದ ವಿಶ್ವಕರ್ಮ ಮುಖಂಡರು ಹಾಗೂ ರಾಜೇಶ ನಾಯಕರ ಕ್ಷೇತ್ರದಲ್ಲಿ ವಿಧಾನಸಭೆ ಚುನಾವಣೆ ಹಿನ್ನಲೆ ಪ್ರಚಾರ ಬಲು ಜೋರಾಗಿ ನಡೆದಿದೆ.

ಆದರೆ ವಿಶೇಷವಾಗಿ ವಿಶ್ವಕರ್ಮ ಸಮಾಜದವರು ರಾಜೇಶ ನಾಯಕರ ಪರ ಮತ ಯಾಚನೆ ಮಾಡಿ ಇವರು ಮಾಡಿದ ಅಪಾರ ಅಭಿವೃದ್ಧಿ ಕೆಲಸ ಮರೆಯಲಾರದಷ್ಟಿದೆ ವಿಶ್ವಕರ್ಮರಿಗೆ ಹಲವು ಯೋಜನೆಗಳನ್ನ ಜಾರಿ ತಂದು ವಿಶ್ವಕರ್ಮರಿಗೆ ವಿಶೆಷ ಕೊಡುಗೆಯಾಗಿದೆ.

ಹಿಂದುಳಿದ ಜನಾಂಗವನ್ನ ಮೇಲೆತ್ತಿ ಹಿಡಿದ ಏಕೈಕ ಯುವನಾಯಕ ಹಾಗೂ ಮತಯಾಚಿಸುವ ಮೂಲಕ ವಿಶ್ವಕರ್ಮ ಸಮಾಜದ ಬಾಬು ಪತ್ತಾರ ಹಾಗೂ ಮತಯಾಚನೆ ತಂಡದ ಮುಖ್ಯಸ್ಥರಾಗಿ ಸಂತೋಷ ಪತ್ತಾರ, ಉತ್ತರ ಕರ್ನಾಟಕ ವಿಶ್ವಕರ್ಮ ಸಮಾಜದ ಅಧ್ಯಕ್ಷರಾದ ಉಮೇಶ ಪತ್ತಾರ, ಧರ್ಮವೀರ ಸಿಂಗ್, ಬಿಜೆಪಿ ಯುವ ಮೊರ್ಚಾ ಬೆಂಗಳೂರು ಸೌಥ, ಹಾಗೂ ಇನ್ನಿತರ ಗಣ್ಯ ವ್ಯಕ್ತಿಗಳು ಬಿಜೆಪಿ ಪರ ಮತಯಾಚಿಸಿ ರಾಜೇಶ ನಾಯಕರಿಗೆ ಅಪೂರ್ವ ಬೆಂಬಲ ನೀಡಿ ಜೈ ಅಂದಿದ್ದಾರೆ.

## ಬಿಜೆಪಿಯವರ ಬೆದರಿಕೆಗೆ ಕನ್ನಡಿಗರು ಹೆದರುವುದಿಲ್ಲ: ಡಿ.ಕೆ.ಶಿ ತಿರುಗೇಟು

ಬೆಂಗಳೂರು: 'ಬಿಜೆಪಿಗೆ ಮತ ಹಾಕದಿದ್ದರೆ ರಾಜ್ಯಕ್ಕೆ ಕೇಂದ್ರದ ಯೋಜನೆ ನೀಡುವುದಿಲ್ಲ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ ನಡ್ಡಾ ಹಾಗೂ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಗಲಭೆಗಳಾಗುತ್ತವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯದ ಜನರಿಗೆ ಬೆದರಿಕೆ ಹಾಕಿದ್ದಾರೆ. ಇಂತಹ ಬೆದರಿಕೆಗಳಿಗೆ ಕನ್ನಡಿಗರು ಹೆದರುವುದಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಸದಾಶಿವನಗರ ನಿವಾಸದ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಸೋಮವಾರ ಪ್ರತಿಕ್ರಿಯೆ ನೀಡಿದ ಶಿವಕುಮಾರ್, ಬಿಜೆಪಿಯವರು ರಾಜ್ಯದ ಜನರಿಗೆ ಬೆದರಿಕೆ ಹಾಕಿ ಮತ ಪಡೆಯಲು ಮುಂದಾಗಿದ್ದಾರೆ. ಬಿಜೆಪಿಗೆ ಮತ ಹಾಕದಿದ್ದರೆ ಕೇಂದ್ರದ ಯೋಜನೆಗಳನ್ನು ನೀಡುವುದಿಲ್ಲ ಎಂದು ಹೇಳಿದ್ದಾರೆ. ಈ ದೇಶ ಒಕ್ಕೂಟ



ವ್ಯವಸ್ಥೆಯಿಂದ ರೂಪುಗೊಂಡಿದೆ. ಕೇಂದ್ರ ಸರ್ಕಾರದ ಆದಾಯದಲ್ಲಿ ಶೇ.41ರಷ್ಟು ಕರ್ನಾಟಕ ರಾಜ್ಯದಿಂದ ಹೋಗುತ್ತಿದೆ. ಇದರಲ್ಲಿ ನಮಗೆ ಮರಳಿ ಬರುತ್ತಿರುವುದು ಬಿಡಿಗಾಸಿನಷ್ಟು ಮಾತ್ರ. ನಡ್ಡಾ ಅವರ ಬೆದರಿಕೆಗೆ ನಾವು ಕನ್ನಡಿಗರು ಹೆದರುವುದಿಲ್ಲ. ಯಾವುದ್ಯಾವುದಕ್ಕೋ ನಾವು ಹೆದರಲಿಲ್ಲ, ಇನ್ನು ಇದಕ್ಕೆ ಹೆದರುತ್ತೇವಾ? ಇನ್ನು ಗೃಹಮಂತ್ರಿಗಳು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಗಲಭೆಗಳಾಗುತ್ತವೆ ಎಂದು ಬೆದರಿಕೆ ಹಾಕಿದ್ದರು. ಈ ರೀತಿ ರಾಜ್ಯದ ಜನರನ್ನು ಹೆದರಿಸುತ್ತಿದ್ದಾರೆ. ಇದು ಕರ್ನಾಟಕದ ಸ್ವಾಭಿಮಾನದ ಚುನಾವಣೆ. ಮೇಕೆದಾಟು ಪಾದಯಾತ್ರೆ ಸಮಯದಲ್ಲಿ ಬಿಜೆಪಿ ಸರ್ಕಾರ ಈ ಯೋಜನೆಗೆ 1 ಸಾವಿರ ಕೋಟಿ ಅನುದಾನ ಘೋಷಣೆ ಮಾಡಿದರು. ಈ ಡಬಲ್ ಇಂಜಿನ್ ಸರ್ಕಾರ ಇದ್ದಾಗ ನಡ್ಡಾ ಅವರು ಶಿಫಾರಸ್ಸು ಮಾಡಿ ಎಲ್ಲಾ ಇಲಾಖೆ ಅನುಮತಿ ಕೊಡಿಸಿ ಕೆಲಸ ಆರಂಭಿಸಲು ಅವರಿಂದ ಸಾಧ್ಯವಾಗಲಿಲ್ಲ. ಈ ಯೋಜನೆಯಲ್ಲಿ ಆಣೆಕಟ್ಟು ನಿರ್ಮಾಣದ ಕಾಮಗಾರಿಗೆ ಬೇಕಾದ ಭೂಮಿ ವಶಕ್ಕೆ ಪಡೆಯಲು ಸರ್ಕಾರ ಯಾಕೆ ಮುಂದಾಗಲಿಲ್ಲ? ಮಹದಾಯಿ ವಿಚಾರವಾಗಿ ಪ್ರಹ್ಲಾದ್ ಜೋಷಿ ಅವರು ಸಂಭ್ರಮಾಚರಣೆ ಮಾಡಿದರಲ್ಲಾ ಇನ್ನು ಯಾಕೆ ಕೆಲಸ ಆರಂಭಿಸಿಲ್ಲ? ಇವರು ಕೇವಲ ಈ ರೀತಿ ಸುಳ್ಳು ಹಾಗೂ ಬೆದರಿಕೆ ಒಡ್ಡುತ್ತಿದ್ದಾರೆ ಎಂದರು.

# ವಿಧಾನಸಭೆ ಚುನಾವಣೆ–ಬಹಿರಂಗ ಪ್ರಚಾರ ಅಂತ್ಯ

# ಸುಗಮ, ಶಾಂತಿಯುತ ಮತದಾನಕ್ಕೆ ಅಗತ್ಯ ಸಿದ್ಧತೆ: ಜಿಲ್ಲಾಧಿಕಾರಿ ನಿತೇಶ್ ಪಾಟೀಲ

ಬೆಳಗಾವಿ: ವಿಧಾನಸಭಾ ಚುನಾವಣಾ ಅಂಗವಾಗಿ ಮೇ 10 ರಂದು ಮತದಾನ ನಡೆಯಲಿದ್ದು, ಜಿಲ್ಲೆಯ 18 ಮತಕ್ಷೇತ್ರಗಳಲ್ಲಿ ಶಾಂತಿಯುತ ಹಾಗೂ ಸುಗಮ ಮತದಾನ ಪ್ರಕ್ರಿಯೆಗೆ ಎಲ್ಲ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ತಿಳಿಸಿದರು.

ನಗರದ ಆರ್ಪಿ.ಡಿ. ಮಹಾವಿದ್ಯಾಲಯದಲ್ಲಿ ಸ್ಥಾಪಿಸಲಾಗಿರುವ ಮತ ಎಣಿಕೆ ಕೇಂದ್ರದ ಆವರಣದಲ್ಲಿರುವ ಮಾಧ್ಯಮ ಕೇಂದ್ರದಲ್ಲಿ ಸೋಮವಾರ (ಮೇ 8) ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಜಿಲ್ಲೆಯ 18 ಮತಕ್ಷೇತ್ರಗಳಲ್ಲಿ ಒಟ್ಟಾರೆ 187 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಇದರಲ್ಲಿ 174 ಪುರುಷರು ಹಾಗೂ 13 ಮಹಿಳೆಯರಿದ್ದಾರೆ. ಒಟ್ಟು 360 ಜನರು ನಾಮಪತ್ರ ಸಲ್ಲಿಸಿದ್ದು, 25 ನಾಮಪತ್ರಗಳು ತಿರಸ್ಕೃತಗೊಂಡಿರುತ್ತವೆ. 47 ಅಭ್ಯರ್ಥಿಗಳು ನಾಮಪತ್ರ ವಾಪಸ್ ಪಡೆದುಕೊಂಡಿರುತ್ತಾರೆ.

**ಜಿಲ್ಲೆಯಲ್ಲಿ 39.47 ಲಕ್ಷ ಮತದಾರರು:**

ಜಿಲ್ಲೆಯಲ್ಲಿ ಒಟ್ಟಾರೆ 39,47,150 ಮತದಾರ–ರಿದ್ದು, 20,424 ಸೇವಾ ಮತದಾರರು ಸೇ–ರಿದಂತೆ ಒಟ್ಟು 39,67,574 ಜನರು ಮತ ಚಲಾಯಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ತಿಳಿಸಿದರು.

18 ರಿಂದ 19 ವಯೋಮಾನದ 94,652 ಯುವ ಮತದಾರರಿದ್ದಾರೆ. 42, 761 ವಿಕಲಚೇತನ ಮತದಾರರು, 80 ವರ್ಷ ಮೇಲ್ಪಟ್ಟಿರುವ 1,00,095 ಹಾಗೂ 151 ಇತರೆ ಮತದಾರರಿದ್ದಾರೆ.

**ಜಿಲ್ಲೆಯಲ್ಲಿ 4439 ಮತಗಟ್ಟೆಗಳು:**

ಜಿಲ್ಲೆಯ ಹದಿನೆಂಟು ಮತಕ್ಷೇತ್ರಗಳಲ್ಲಿ 4434 ಮತಗಟ್ಟೆಗಳು ಮತ್ತು 5 ಹೆಚ್ಚುವ–ರಿ(ಆಕ್ಸಿಲರಿ) ಮತಗಟ್ಟೆಗಳು ಸೇರಿದಂತೆ ಒಟ್ಟು 4439 ಮತಗಟ್ಟೆಗಳಿವೆ ಎಂದು ಜಿಲ್ಲಾಧಿಕಾರಿ ಮಾಹಿತಿಯನ್ನು ನೀಡಿದರು.

ರಾಜ್ಯದಲ್ಲಿಯೇ ಬೆಳಗಾವಿಯಲ್ಲಿ ಅತೀ ಹೆಚ್ಚು ಜನರು ಮನೆಯಿಂದ ಮತದಾನ ಮಾಡಿರುತ್ತಾರೆ. 300 ಕ್ರಿಟಿಕಲ್ ಬೂತ್, 701 ವಲ್ನರೇಬಲ್ ಹಾಗೂ ಕ್ರಿಟಿಕಲ್ ಮತಗಟ್ಟೆ ಭದ್ರತೆಗೆ ಒಟ್ಟು 10,913 ಪೊಲೀಸ್ ಅಧಿಕಾರಿ/ ಸಿಬ್ಬಂದಿಯನ್ನು ಮತ್ತು 21,600 ಜನ ಚುನಾವಣಾ ಸಿಬ್ಬಂದಿ ನಿಯೋಜಿಸಲಾಗಿರುತ್ತದೆ. ಮತ ಎಣಿಕೆ ಮೇ 13 ರಂದು ಬೆಳಗಾವಿ ನಗರದ ಆರ್ಪಿ.ಡಿ. ಮಹಾವಿದ್ಯಾಲಯದಲ್ಲಿ ನಡೆಯಲಿದೆ ಎಂದು ತಿಳಿಸಿದರು.

**26.18 ಕೋಟಿ ಮೊತ್ತದ ವಸ್ತು ವಶ:**

ಜಿಲ್ಲೆಯಲ್ಲಿ ಒಟ್ಟಾರೆ 26.18 ಕೋಟಿ ನಗದು, ಮದ್ಯ, ಮತ್ತಿತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಎಲ್ಲ ತಂಡಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿವೆ. ಮಾದರಿ ನೀತಿ ಸಂಹಿತೆ ಪಾಲನೆಗೆ ಕಟ್ಟುನಿಟ್ಟಿನ



ಕ್ರಮ ಕೈಗೊಳ್ಳಲಾಗಿದ್ದು, ಒಟ್ಟಾರೆ 69 ಎಫ್.ಐ.ಆರ್. ದಾಖಲಿಸಲಾಗಿರುತ್ತದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

**ಬಹಿರಂಗ ಪ್ರಚಾರ ಅಂತ್ಯ:**

ಮೇ 8 ರಂದು ಸಂಜೆ 6 ಗಂಟೆಗೆ ಬಹಿರಂಗ ಪ್ರಚಾರ ಅಂತ್ಯವಾಗಲಿದ್ದು, ಮನೆ ಮನೆಗೆ ತೆರಳಿ ಚುನಾವಣಾ ಪ್ರಚಾರಕ್ಕೆ ಅವಕಾಶವಿರುತ್ತದೆ.

ಬೇರೆ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಕ್ತಿಗಳು ಕಡ್ಡಾಯವಾಗಿ ತಮ್ಮ ಊರುಗಳಿಗೆ ತೆರಳಬೇಕು. ಚುನಾವಣಾ ಪ್ರಚಾರಕ್ಕೆ ಬೇರೆ ಕಡೆಯಿಂದ ಆಗಮಿಸಿರುವ ಯಾವುದೇ ವ್ಯಕ್ತಿಯು ಕ್ಷೇತ್ರದಲ್ಲಿ ಇರಕೂಡದು ಎಂದು ತಿಳಿಸಿದರು. ಮತದಾನ ದಿನದಂದು ರಾಜಕೀಯ ಪಕ್ಷಗಳಿಗೆ ಪ್ರತಿ ಮತಗಟ್ಟೆಯ 200 ಮೀಟರ್ ಹೊರಗಡೆ ಒಂದು ಟೇಬಲ್ ಮತ್ತು ಕುರ್ಚಿ ಹಾಕಲು ಮಾತ್ರ ಅವಕಾಶ ಕಲ್ಪಿಸಲಾಗುವುದು.

ಮತಗಟ್ಟೆ ಸಿಬ್ಬಂದಿ ಮೇ 9 ರಂದು ಮಸ್ಟ–ರಿಂಗ್ ಸ್ಥಳದಿಂದ ತಮಗೆ ನಿಯೋಜಿಸಲಾದ ಮತಗಟ್ಟೆಗಳಿಗೆ ತೆರಳಲಿದ್ದಾರೆ. ಶಾಂತಿಯುತ, ಸುಗಮ ಮತದಾನಕ್ಕೆ ಅನುಕೂಲವಾಗುವಂತೆ ಎಲ್ಲ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ. ಪ್ರತಿಯೊಬ್ಬರೂ ತಪ್ಪದೇ ಮತದಾನ ಮಾಡಬೇಕು. ಯಾವುದೇ ಆತಂಕ, ಭಯವಿಲ್ಲದೇ ಆಮಿಷಕ್ಕೆ ಒಳಗಾಗದೇ ಮುಕ್ತವಾಗಿ ಹಾಗೂ ನಿರ್ಭೀತಿಯಿಂದ ಮತ ಚಲಾಯಿಸಬೇಕು ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ಹೇಳಿದರು.

**ಮುಕ್ತ ನ್ಯಾಯಸಮ್ಮತ ಚುನಾವಣೆಗೆ; ಬಿಗಿಭದ್ರತೆ:**

ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸುವ ನಿಟ್ಟಿನಲ್ಲಿ ಅಗತ್ಯ ಭದ್ರತಾ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ ಎಂದು ಬೆಳಗಾವಿ ನಗರ ಪೊಲೀಸ್ ಆಯುಕ್ತರಾದ ಡಾ.ಎಂ.ಬಿ.ಬೋರಲಿಂಗಯ್ಯ ಹೇಳಿದರು.

ಕೇಂದ್ರ ಮೀಸಲು ಪಡೆ, ಪೊಲೀಸ್ ಮೀಸಲು ಪಡೆ, ಗೃಹರಕ್ಷಕ ದಳ ಹಾಗೂ ನಾಗರಿಕ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗುತ್ತಿದೆ.

4803 ನಾಗರಿಕ ಪೊಲೀಸ್, 1354 ಗೃಹರಕ್ಷಕ ದಳ ಸಿಬ್ಬಂದಿ, 19 ಕೆ.ಎಸ್.ಆರ್ಪಿ. ತುಕಡಿ, 249 ಸಶಸ್ತ್ರ ಮೀಸಲು ಪಡೆ ಹಾಗೂ 53 ಕೇಂದ್ರೀಯ ಸಶಸ್ತ್ರ ಕಂಪೆನಿಗಳನ್ನು ಜಿಲ್ಲೆಯಲ್ಲಿ ಚುನಾವಣಾ ಭದ್ರತೆಗೆ ನಿಯೋಜಿಸಲಾಗಿದೆ ಎಂದರು. ಇಬ್ಬರು ಪೊಲೀಸ್ ವೀಕ್ಷಕರ ಮಾರ್ಗದರ್ಶನದಲ್ಲಿ ಅಗತ್ಯ ಭದ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಡಾ.ಬೋರಲಿಂಗಯ್ಯ ತಿಳಿಸಿದರು.

**ನೆರೆಯ ರಾಜ್ಯಗಳೊಡನೆ ಸಮನ್ವಯತೆ:**

9 ಸಾವಿರಕ್ಕೂ ಅಧಿಕ ಪೊಲೀಸ್ ಅಧಿಕಾ–ರಿಗಳು ಮತ್ತು ಸಿಬ್ಬಂದಿಯನ್ನು ಜಿಲ್ಲೆಯಲ್ಲಿ ನಿಯೋಜಿಸಲಾಗಿದೆ. ಗೋವಾ, ಮಹಾರಾಷ್ಟ್ರದಿಂದ ಗೃಹರಕ್ಷಕ ಸಿಬ್ಬಂದಿ ಆಗಮಿಸಿರುತ್ತಾರೆ. ಎಲ್ಲರನ್ನೂ ಬಳಸಿಕೊಂಡು ಭಯಮುಕ್ತ ಮತದಾನದ ವಾತಾವರಣವನ್ನು ಸೃಷ್ಟಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ ತಿಳಿಸಿದರು. ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದವರನ್ನು ಗುರುತಿಸಿ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ನೆರೆಯ ಮಹಾರಾಷ್ಟ್ರ ಮತ್ತು ಗೋವಾ ರಾಜ್ಯದ ಉನ್ನತ ಪೊಲೀಸ್ ಅಧಿಕಾರಿಗಳ ಜತೆ ಚರ್ಚಿಸಲಾಗಿರುತ್ತದೆ. ಕೊನೆಯ ಗಳಿಗೆಯಲ್ಲಿ ನಡೆಯುವ ಅಕ್ರಮ ತಡೆಗಟ್ಟಲು ಜಂಟಿ ಚೆಕ್ ಪೋಸ್ಟ್ ಗಳನ್ನು ಕೂಡ ಸ್ಥಾಪಿಸಲಾಗಿದೆ ಎಂದರು.

ಮತದಾರರಿಗೆ ಆಮಿಷ ಒಡ್ಡುವುದನ್ನು ತಡೆಗಟ್ಟಲು ಮತ್ತು ಭಯಮುಕ್ತ ವಾತಾವರಣ ಸೃಷ್ಟಿಗೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಯಾವುದೇ ರೀತಿಯ ಆತಂಕಕ್ಕೆ ಒಳಗಾಗದೇ ಆಮಿಷಕ್ಕೆ ಬಲಿಯಾಗದೇ ಮತದಾನ ಮಾಡಬೇಕು ಎಂದು ಡಾ.ಸಂಜೀವ ಪಾಟೀಲ ಅವರು ಮನವಿ ಮಾಡಿಕೊಂಡರು.

ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರೂ ಆಗಿರುವ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹರ್ಷಲ್ ಭೋಯರ್ ಅವರು, ಮತದಾನ ಪ್ರಮಾಣ ಹೆಚ್ಚಳಗೊಳಿಸುವ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ ಮತದಾನ ಕುರಿತು ಜಾಗೃತಿ ಮೂಡಿಸಲಾಗಿದೆ ಎಂದು ತಿಳಿಸಿದರು.

ಇದಾದ ಬಳಿಕ ಮತ ಎಣಿಕೆ ಕೊಠಡಿ ಹಾಗೂ ಸ್ಟ್ರಾಂಗ್ ರೂಮ್ ಗಳಿಗೆ ಭೇಟಿ ನೀಡಿದ ಜಿಲ್ಲಾ ಚುನಾವಣಾಧಿಕಾರಿ ನಿತೇಶ್ ಪಾಟೀಲ ಅವರು, ಚುನಾವಣಾ ಆಯೋಗದ ಮಾರ್ಗಸೂಚಿ ಪ್ರಕಾರ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದರು.

## ದಲಿತರ ಉನ್ನತೀಕರಣಕ್ಕೆ ಕತ್ತಿ ಕುಟುಂಬದ ಕೊಡುಗೆ ಅಪಾರ



ಹುಕ್ಕೇರಿ : ಕ್ಷೇತ್ರ ವ್ಯಾಪ್ತಿಯ ದಲಿತರ ಉನ್ನತೀಕರಣ–ಕ್ಕೆ ಕತ್ತಿ ಕುಟುಂಬ ಸದಾ ಟೊಂಕ ಕಟ್ಟಿ ನಿಂತಿದ್ದು ಈ ಹಿನ್ನಲೆಯಲ್ಲಿ ಸಮಸ್ತ ದಲಿತ ಸಮಾಜ ಚಿರಋಣಿಯಾಗಿದೆ ಎಂದು ಬಿಜೆಪಿ ಮುಖಂಡರೂ ಆದ ಎಸ್ಸಿಎಸ್ಟಿ ದೌರ್ಜನ್ಯ ನಿಯಂತ್ರಣ ಜಿಲ್ಲಾ ಸಮಿತಿ ಸದಸ್ಯ ಸುರೇಶ ತಳವಾರ ಹೇಳಿದರು.

ಪಟ್ಟಣದ ವಿಶ್ವರಾಜ ಭವನದ ಉದ್ಯಾನವನದಲ್ಲಿ ರವಿವಾರ ಸಂಜೆ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಿಖಿಲ್ ಕತ್ತಿ ಪರ ಚುನಾವಣಾ ಪ್ರಚಾರಾರ್ಥ ಏರ್ಪಡಿಸಿದ್ದ ಬೃಹತ್ ದಲಿತ ಸಮಾವೇಶದಲ್ಲಿ ಮಾತನಾಡಿದ ಅವರು, ದಲಿತ ಸಮುದಾಯದ ಬಲವರ್ಧನೆಗೆ ಕತ್ತಿ ಸಹೋದರರು ಸಾಕಷ್ಟು ಕೊಡುಗೆ ನೀಡಿರುವುದು ಸ್ಮರಣೀಯ ಎಂದರು.

ಕ್ಷೇತ್ರದಲ್ಲಿ ಶೋಷಿತರು, ತುಳಿತಕ್ಕೆ ಒಳಗಾದವರು, ದಲಿತರನ್ನು ಇತರೆ ಸಮಾಜದೊಂದಿಗೆ ಸಮಾನವಾಗಿ ಪರಿಗಣಿಸಲಾಗಿದೆ. ಸಮ ಸಮಾಜ ನಿರ್ಮಾಣದ ಪರಿಕಲ್ಪನೆಯಿಂದ ಎಲ್ಲ ವರ್ಗಕ್ಕೂ ಸಾಮಾಜಿಕ ನ್ಯಾಯ ಒದಗಿಸಲಾಗಿದೆ. ಈ ಶ್ರೇಯಸ್ಸು ಕತ್ತಿ ಕುಟುಂಬಕ್ಕೆ ಸಲ್ಲುತ್ತದೆ. ಹಾಗಾಗಿ ಪ್ರಸಕ್ತ ಚುನಾವಣೆಯಲ್ಲಿ ಈ ಕುಟುಂಬದ ಸದಸ್ಯರೂ ಆದ ಬಿಜೆಪಿ ಅಭ್ಯರ್ಥಿ ನಿಖಿಲ್ ಕತ್ತಿ ಅವರಿಗೆ ಮತ ನೀಡಿ ಆಯ್ಕೆ ಮಾಡಬೇಕು ಎಂದು ತಳವಾರ ಮನವಿ ಮಾಡಿದರು.

ಕ್ಷೇತ್ರದ ಬಹುತೇಕ ಹಳ್ಳಿಗಳ ಎಸ್ಸಿಎಸ್ಟಿ ಕಾಲೋನಿಗಳಿಗೆ ತೆರಳಿ ಮತಪ್ರಚಾರ ನಡೆಸಿದ್ದು ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕೇಂದ್ರ ಮತ್ತು ರಾಜ್ಯ ಬಿಜೆಪಿ ಡಬಲ್ ಎಂಜಿನ್ ಸರ್ಕಾರ ದಲಿತ ಸಮುದಾಯಗಳ ಏಳಿಗೆಗೆ ಮಹತ್ತರ ಕೊಡುಗೆ ನೀಡಿವೆ. ಜತೆಗೆ ದಿ.ಉಮೇಶ ಕತ್ತಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ ಎಂದು ಅವರು ಹೇಳಿದರು.

ಅಭ್ಯರ್ಥಿ ನಿಖಿಲ್ ಕತ್ತಿ, ರಾಜ್ಯ ಬಿಜೆಪಿ ಮುಂಚೂಣಿ ನಾಯಕರಾದ ರಾಘವೇಂದ್ರ ಕಾಗವಾಡೆ, ಮಹೇಂದ್ರ ಕೌತಾಳ, ಮುಖಂಡ ಬಸವರಾಜ ಮಟಗಾರ ಮಾತನಾಡಿದರು. ಕ್ಷೇತ್ರದ ಸಮಸ್ತ ದಲಿತ ಸಮುದಾಯದ ಪ್ರಮುಖರು ಮತ್ತು ಕಾರ್ಯಕರ್ತರನ್ನು ಒಂದೆಡೆ ಸೇರಿಸಿ ಬಿಜೆಪಿ ಬೆಂಬಲಿಸುವ ಉದ್ದೇಶದೊಂದಿಗೆ ಈ ಸಮಾವೇಶ ಆಯೋಜಿಸಲಾಗಿತ್ತು. ಸಮಾವೇಶದಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಜನ ಜಮಾಯಿಸಿದ್ದರು. ಪುರಸಭೆ ಮಾಜಿ ಅಧ್ಯಕ್ಷ ಉದಯ ಹುಕ್ಕೇರಿ, ಮುಖಂಡರಾದ ಅಶೋಕ ಪಾಟೀಲ, ಶ್ರೀಕಾಂತ ತಳವಾರ, ಬಿ.ಕೆ.ಸದಾಶಿವ, ಗುರಪ್ಪಾ ತಳವಾರ, ರಮೇಶ ಹುಂಜಿ, ಅಪ್ಪಣ್ಣಾ ಖಾತೇದಾರ, ಮುತ್ತು ಕಾಂಬಳೆ, ಯಲ್ಲಪ್ಪ ಡಪ್ಪರಿ, ರಾಜೇಂದ್ರ ಮೋಶಿ, ಶಿವಾಜಿ ಸಂಜೀವಗೋಳ, ಶಿವಾನಂದ ಮರಿನಾಯಿಕ, ಕುಮಾರ ಹ–ರಿಜನ, ಶಂಕರ ತಿಪ್ಪನಾಯಿಕ, ರೋಹಿತ ತಳವಾರ ಮತ್ತಿತರರು ಉಪಸ್ಥಿತರಿದ್ದರು.

## ಸರ್ಕಾರದ ಸಾಧನೆ ಮೆಚ್ಚಿ ಬಿಜೆಪಿ ಸೇರ್ಪಡೆ

ಬೆಳಗಾವಿ: ಮೋದಿಯವರ ಕಳಂಕರಹಿತ ಅಭಿವೃದ್ಧಿಪರ ಡಬಲ್ ಇಂಜಿನ್ ಸರ್ಕಾರದ ಸಾಧನೆಗಳನ್ನು ಮೆಚ್ಚಿ ಯುವ ಸಮುದಾಯ ಬಿಜೆಪಿಗೆ ಸೇರ್ಪಡೆಯಾಗುತ್ತಿರುವದು ಬಿಜೆಪಿಗೆ ಮತ್ತಷ್ಟು ಶಕ್ತಿ ತುಂಬಿದಂತಾಗಿದೆ ಎಂದು ಗ್ರಾಮಾಂತರ ಜಿಲ್ಲಾಧ್ಯಕ್ಷ ಸಂಜಯ ಪಾಟೀಲ ಹರ್ಷವ್ಯಕ್ತಪಡಿಸಿದ್ದಾರೆ.

ಸಮೀಪದ ಬಾಳೆಕುಂದರಗಿ ಕೆ.ಎಚ್. ಗ್ರಾಮದಲ್ಲಿ ರವಿವಾರ ಜರುಗಿದ ಬಿಜೆಪಿ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಜೆಡಿ–ಎಸ್. ಕಾಂಗ್ರೆಸ್ ಪಕ್ಷ ತೊರೆದು ನೂರಾರು ಯುವಕರನ್ನ ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿ, ಭಾರತವನ್ನು ಜಗದ್ಗುರು ಮಾಡಲು ಹಗಲಿರಳು ಶ್ರಮಸುತ್ತಿರುವ ಯುವಕರ ಕಣ್ಮಣಿ ನರೇಂದ್ರ ಮೊದಿಯವರ ಕಾರ್ಯಶೈಲಿಯನ್ನು ಮೆಚ್ಚಿಕೊಂಡು ಅನ್ಯ ಪಕ್ಷವನ್ನು ತೊರೆದು ಬಿಜೆಪಿ ಸೇರ್ಪಡೆಯಾದ ಯುವಕರ ಸೇವೆ ಇನ್ನು ಮುಂದೆ ಬಿಜೆಪಿಗೆ ದೊರೆಯಲಿದೆ. ಇದ–ರಿಂದ ಗ್ರಾಮೀಣ ಮತಕ್ಷೇತ್ರದಲ್ಲಿ ಬಿಜೆಪಿ ಮತ್ತಷ್ಟು ಬಲಿಷ್ಠವಾಗಲಿದೆ. ಭ್ರಷ್ಟಾಚಾರ ರಹಿತ ಪಾರದರ್ಶಕ ಆಡಳಿತದಿಂದ ದೇಶ ಅಭಿವೃದ್ಧಿ ಪತದತ್ತ ದಾಪುಗಾಲ ಹಾಕಿದರೆ ಬರುವ ದಿನಗಳಲ್ಲಿ ರಾಜ್ಯವನ್ನ ದೇಶದಲ್ಲಿ ನಂ 1ರಾಜ್ಯಮಾಡಲು ಪಣ ತೊಟ್ಟಿರುವ ಪ್ರಧಾನಿಗಳ ಅಸೆಯಂತೆ ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಸರ್ಕಾರ ಬರಲಿದೆ ಎಂದರು.






ಜಿಲ್ಲಾ ಉಪಾಧ್ಯಕ್ಷ ಯುವರಾಜ ಜಾಧವ, ಕಣ್ಣಪ್ಪ ಬಡಕನ್ನವರ, ದಿಶಾ ಸಮಿತಿ ಸದಸ್ಯ ರಾಜು ದೇಸಾಯಿ,ಉದ್ಯಮಿ ಶಿವರಾಜ ಜಾಧವ, ಜಿಲ್ಲಾ ಖಜಾಂಚಿ ಮಲ್ಲಿಕಾರ್ಜುನ ಮಾದಮ್ಮನವರ, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಯಲ್ಲೇಶ ಕೊಲಕಾರ ಅವರ ಸತತ ಪ್ರಯತ್ನದಿಂದ ಇವರೆಲ್ಲರ ಸಮ್ಮುಖದಲ್ಲಿ, ಬೆಂಡಿಗೇರಿ, ಶಗಣಮಟ್ಟಿ, ಚಂದನ ಹೊಸೂರ, ಮಾಸ್ತಮರ್ಡಿ, ಮುತಗಾ, ಕಮಾರಟ್ಟಿ, ಬಸ್ತವಾಡ, ಮಾವಿನಕಟ್ಟಿ, ಕೆ.ಕೆ.ಕೊಪ್ಪ, ಹಾಲಗಿಮರ್ಡಿ, ಸಾಂಬ್ರಾ, ಸುಳೇಭಾವಿ ಹಾಗೂ ಬಸರಿಕಟ್ಟಿ ಗ್ರಾಮದ ನೂರಾರು ಜನರು ಕಾಂಗ್ರೆಸ್ ಹಾಗೂ ಜೆಡಿಎಸ್. ಪಕ್ಷ ತೊರೆದು ಬಿಜೆಪಿ ಪಕ್ಷಕ್ಕೆ ಸೇರ್ಪಡೆಯಾದರು.

## ಡಬಲ್ ದರಕ್ಕೆ ಮಾರಾಟ ಮಾಡಲು ಸಂಗ್ರಹಿಸಿಟ್ಟಿದ್ದ 1.72 ಲಕ್ಷ ಮೌಲ್ಯದ ಮದ್ಯ ವಶ



ಯಾದಗಿರಿ: ಜಿಲ್ಲೆಯ ವಡಗೇರಾ ತಾಲೂಕಿನ ಕೊಂಕಲ್ ಗ್ರಾಮದ ಮನೆಯೊಂದರಲ್ಲಿ ಶುಕ್ರವಾರ ಅಕ್ರಮವಾಗಿ ಸಂಗ್ರಹಿಸಿ ಇಟ್ಟಿದ್ದ 1ಲಕ್ಷ 72 ಸಾವಿರ ಮೌಲ್ಯದ ವಿವಿಧ ಕಂಪನಿಯ ಅಕ್ರಮ ಮದ್ಯವನ್ನು ಅಬಕಾರಿ ಇಲಾಖೆಯ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಪ್ರಕರಣ ಸಂಬಂಧ ಆರೋಪಿಯನ್ನು ಬಂಧಿಸಿದ್ದಾರೆ. ಕೊಂಕಲ್ ಗ್ರಾಮದ ಅಮೀನರಡ್ಡಿ ಸಿದ್ದಣ್ಣಗೌಡ ಪಾಟೀಲ ಬಂಧಿತ ಆರೋಪಿ. ಚುನಾವಣೆ ಹಿನ್ನೆಲೆ ಮದ್ಯವನ್ನ ಖರೀದಿಸಿಟ್ಟಿದ್ದ ಆರೋಪಿ, ದುಪ್ಪಟ್ಟು ದರಕ್ಕೆ ಮಾರಾಟ ಮಾಡೋ ಪ್ಲಾನ್ ಮಾಡಿದ್ದ ಎನ್ನಲಾಗಿದೆ. ಖಚಿತ ಮಾಹಿತಿ ಮೇರೆಗೆ ದಾಳಿ ಮಾಡಿದ ಅಬಕಾರಿ ಅಧಿಕಾರಿಗಳ ತಂಡ ಅಕ್ರಮ ಮದ್ಯವನ್ನ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದೆ.

## ಬಿಜೆಪಿ ಅಭ್ಯರ್ಥಿಗೆ ಸೇರಿದ 1800 ಕುಕ್ಕರ್ ಜಪ್ತಿ ಮಾಡಿದ ಪೊಲೀಸರು

ಬೆಳಗಾವಿ: ಮತದಾರರಿಗೆ ಹಂಚಲು ತಂದಿಟ್ಟ 25 ಲಕ್ಷ ಮೌಲ್ಯದ 1800 ಕುಕ್ಕರ್ಗಳನ್ನ ಪೊಲೀಸರು ವಶಕ್ಕೆ ಪಡೆದಿರುವ ಘಟನೆ ಜಿಲ್ಲೆಯ ಬೈಲಹೊಂಗಲ ತಾಲೂಕಿನ ತಡಸಲೂರ ಗ್ರಾಮದ ತೋಟದ ಮನೆಯಲ್ಲಿ ನಡೆದಿದೆ.

ಈ ಕುಕ್ಕರ್ಗಳು ರಾಮದುರ್ಗ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಚಿಕ್ಕರೇವಣ್ಣ ಎಂಬುವವರಿಗೆ ಸೇ–ರಿದ್ದು ಕೊನೆಯ ಹಂತದಲ್ಲಿ ಮತದಾರರಿಗೆ ಹಂಚಲು ಕಾರ್ಯಕರ್ತರ ತೋಟದ ಮನೆಯಲ್ಲಿ ಚಿಕ್ಕರೇವಣ್ಣ ಇಟ್ಟಿದ್ದರು ಎನ್ನಲಾಗಿತ್ತು.



ಸಕಾರ್ಯಕರ್ತ ಬೀರಪ್ಪ ಎಂಬುವವರ ಮೂಲಕ ಚನ್ನಪ್ಪ ಎಂಬುವವರ ತೋಟದ ಮನೆಯಲ್ಲಿ ಇಷ್ಟು ದೊಡ್ಡ ಪ್ರಮಾಣದ ದಾಸ್ತಾನನ್ನು ಇಡಲಾಗಿತ್ತು. ಇದರ ಬಗ್ಗೆ ಮಾಹಿತಿ ಪಡೆದ ಮುರಗೋಡ ಪೊಲೀಸರು, ತಡರಾತ್ರಿ ದಾಳಿ ನಡೆಸಿದಾಗ 1800 ಕುಕ್ಕರ್ಗಳು ಪತ್ತೆಯಾಗಿದ್ದು ಅವುಗಳನ್ನು ಜಪ್ತಿ ಮಾಡಲಾಗಿದೆ.

ಸದ್ಯ ಬಿಜೆಪಿ ಅಭ್ಯರ್ಥಿ ಚಿಕ್ಕರೇವಣ್ಣ, ಬೀರಪ್ಪ ಮತ್ತು ಚನ್ನಪ್ಪ ಮೂವರ ವಿರುದ್ಧ ಮುರಗೋಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## 14 ಬಾರಿ ಚಿನ್ನದ ಅಂಬಾರಿ ಹೊತ್ತಿದ್ದ ಆನೆ ಬಲರಾಮ ಇನ್ನಿಲ್ಲ



ಮೈಸೂರು: ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಮೈಸೂರು ದಸರಾ ಗಜಪಡೆಯ ಮಾಜಿ ಕ್ಯಾಪ್ಟನ್ ಬಲರಾಮ ಆನೆ (67) ಸಾವನ್ನಪ್ಪಿದೆ. ನಾಗರಹೊಳೆ ಉದ್ಯಾನದ ಹುಣಸೂರು ರೇಂಜ್ ವ್ಯಾಪ್ತಿಯ ಭೀಮನಕಟ್ಟೆ ಆನೆ ಶಿಬಿರದಲ್ಲಿದ್ದ ಬಲರಾಮ ಆನೆಯ ಬಾಯಿಯಲ್ಲಿ ಹುಣ್ಣಾಗಿತ್ತು. ಇದರಿಂದ ಆನೆ ಆಹಾರ, ನೀರು ಸೇವಿಸಲು ಆಗದಂತಹ ಸ್ಥಿತಿ ಉಂಟಾಗಿತ್ತು. ಪರಿಣಾಮವಾಗಿ ಬಲರಾಮ ಆನೆ ನಿತ್ರಾಣಗೊಂಡಿತ್ತು. ಆನೆಗೆ ಶಿಬಿರದಲ್ಲೇ ಪಶುವೈದ್ಯರು ಚಿಕಿತ್ಸೆ ನೀಡುತ್ತಿದ್ದರು. ಆದರೆ ಚಿಕಿತ್ಸೆ ಫಲಿಸದೇ ಆನೆ ಮೃತಪಟ್ಟಿದೆ.

ಬಲರಾಮ ಆನೆ ವಿಶ್ವವಿಖ್ಯಾತ ಮೈಸೂರು ದಸರಾದ ಜಂಬೂಸವಾರಿ ಮೆರವಣಿಗೆಯಲ್ಲಿ ಬರೋಬ್ಬರಿ 14 ಬಾರಿ ಚಿನ್ನದ ಅಂಬಾರಿ ಹೊತ್ತು ಖ್ಯಾತಿ ಗಳಿಸಿತ್ತು. ಅತ್ಯಂತ ಸೌಮ್ಯ ಸ್ವಭಾವದ ಆನೆ ಎಂದು ಗಮನ ಸೆಳೆದಿತ್ತು. ಬಲರಾಮ ಆನೆ ಮೇಲೆ ಜನರಲ್ಲಿ ವಿಶೇಷ ಪ್ರೀತಿ ಇತ್ತು.

## ಕಳೆದ ಬಾರಿಗಿಂತ ಹೆಚ್ಚಿನ ಲೀಡ್: ಲಕ್ಷ್ಮೀ ಹೆಬ್ಬಾಳಕರ್ ವಿಶ್ವಾಸ

### ಇಡೀ ಕ್ಷೇತ್ರ ನನ್ನ ಮನೆ, ಕ್ಷೇತ್ರದ ಜನರೆಲ್ಲ ನನ್ನ ಕುಟುಂಬದ ಸದಸ್ಯರು: ಲಕ್ಷ್ಮೀ ಹೆಬ್ಬಾಳಕರ್

ಬೆಳಗಾವಿ : ಈ ಬಾರಿಯ ವಿಧಾನಸಭೆ ಚುನಾವಣೆಗೆ ಕ್ಷೇತ್ರಾದ್ಯಂತ ಪ್ರಚಾರದ ವೇಳೆ ಭಾರೀ ಬೆಂಬಲ ವ್ಯಕ್ತವಾಗಿದ್ದು, ಕಳೆದ ಬಾರಿಗಿಂತ ಹೆಚ್ಚಿನ ಲೀಡ್ ಸಿಗುವ ವಿಶ್ವಾಸವಿದೆ ಎಂದು ಬೆಳಗಾವಿ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮೀ ಹೆಬ್ಬಾಳಕರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬಹಿರಂಗ ಪ್ರಚಾರ ಅಂತ್ಯವಾಗುವ ವೇಳೆ ತಮ್ಮನ್ನು ಭೇಟಿ ಮಾಡಿದ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕಳೆದ ಬಾರಿ ನಾನು ಕ್ಷೇತ್ರಕ್ಕೆ ಹೊಸಬಳಾಗಿದ್ದೆ. ಹೇಳಿಕೊಳ್ಳಲು ಅಭಿವೃದ್ಧಿ ಕೆಲಸಗಳನ್ನೂ ಮಾಡಿರಲಿಲ್ಲ. ಆದ–ರೂ 51 ಸಾವಿರ ಮತಗಳ ಲೀಡ್ ಕೊಟ್ಟಿದ್ದರು. ಆದರೆ ಈ ಬಾರಿ ಇಡೀ ಕ್ಷೇತ್ರದ ಜನರೊಂದಿಗೆ ಸೌಹಾರ್ದಯುತ ಸಂಬಂಧವಿದೆ. ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನೂ ಮಾಡಿಸಿದ್ದೇನೆ. ಹಾಗಾಗಿ ಹಿಂದಿನ ಚುನಾವಣೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಜನ ಬೆಂಬಲ ವ್ಯಕ್ತವಾಗುತ್ತಿದೆ. ಮಹಿಳೆಯರಂತೂ ಎಲ್ಲಿ ಹೋದರೂ ಕೈ ಹಿಡಿದು ಮಾತನಾಡಿಸುತ್ತಿದ್ದರು, ಅಷ್ಟೊಂದು ಪ್ರೀತಿ ತೋರಿಸುತ್ತಿದ್ದರು. ವೃದ್ದರು ತಲೆಯ ಮೇಲೆ ಕೈ ಇಟ್ಟು ಆಶೀರ್ವಾದ ಮಾಡುತ್ತಿದ್ದರು. ಮಗಳೇ ಬಂದಳು ಎನ್ನುವ ರೀತಿಯಲ್ಲಿ ಸಂಭ್ರಮಿಸುತ್ತಿದ್ದರು ಎಂದು ಹೆಬ್ಬಾಳಕರ್



ಪ್ರಚಾರದ ವೇಳೆಗಿನ ಅನುಭವಗಳನ್ನು ಹಂಚಿಕೊಂಡರು.

ಬೆಳಗಾವಿ ಗ್ರಾಮೀಣ ಕ್ಷೇತ್ರವನ್ನು ನಾನು ಕೇವಲ ಇದೊಂದು ಚುನಾವಣೆಗೆ ಸೀಮಿತವಾದ ಕ್ಷೇತ್ರ ಎಂದು ಪರಿಗಣಿಸುವುದಿಲ್ಲ. ಇಡೀ ಕ್ಷೇತ್ರ ನನ್ನ ಮನೆ, ಕ್ಷೇತ್ರದ ಜನರೆಲ್ಲ ನನ್ನ ಕುಟುಂಬದ ಸದಸ್ಯರು ಎಂದೇ ಪರಿಗಣಿಸುತ್ತೇನೆ. ಕಳೆದ 5 ವರ್ಷದಲ್ಲಿ ಜನರ ಕಷ್ಟ ಸುಖದಲ್ಲಿ ಜೊತೆಗಿದ್ದಿದ್ದರಿಂದ ಅಂತಹ ಅಟ್ಯಾಚ್ ಮೆಂಟ್ ಬಂದಿದೆ. ಜನ–ರಿಗೂ, ನನ್ನ ಕುಟುಂಬಕ್ಕೂ ಅವಿನಾಭಾವ ಸಂಬಂಧ ಬೆಳೆದಿದೆ. ನಾವೂ ಅವರನ್ನು ಹೊರಗಿನವರು ಎಂದು ಪರಿಗಣಿಸುವುದಿಲ್ಲ, ಅವರೂ ನಮ್ಮನ್ನು ಬೇರೆಯವರು ಎಂದು ತಿಳಿಯುವುದಿಲ್ಲ. ನಾವೆಲ್ಲ ಒಂದೇ ಕುಟುಂಬದ ಸದಸ್ಯರಾಗಿದ್ದೇವೆ ಎಂದು ಅವರು ಕ್ಷೇತ್ರದೊಂದಿಗಿನ ಸಂಬಂಧವನ್ನು ವಿವ–ರಿಸಿದರು.

ಈ ಬಾರಿಯ ವಿಶೇಷವೆಂದರೆ ನಾನು ಅಧಿಕೃತವಾಗಿ ಪ್ರಚಾರ ಆರಂಭಿಸುವ ಮೊದಲೇ ಕ್ಷೇತ್ರದ ಜನರೇ ಸ್ವಯಂ ಪ್ರೇರಣೆಯಿಂದ ಪ್ರಚಾರ ಆರಂಭಿಸಿಬಿಟ್ಟಿದ್ದರು. ಎಲ್ಲೇ ನಾಲ್ಕು ಜನ ಸೇರಿದರೆ ಅಲ್ಲಿ, ಈ ಬಾರಿ ಅಕ್ಕನನ್ನು ಗೆಲ್ಲಿಸಲೇಬೇಕೆಂದು ಮಾತನಾಡುತ್ತಿದ್ದರು. ಸಾಮಾಜಿಕ ಜಾಲತಾಣಗಳಲ್ಲೂ ಸ್ವಯಂ ಪ್ರೇರಣೆಯಿಂದ ನನ್ನ ಪರವಾದ ಸಂದೇಶ ಕಳಿಸುತ್ತಿದ್ದರು. ಹಾಗಾಗಿ ಅರ್ಧ ಕೆಲಸವನ್ನು ನನಗೆ ಕಡಿಮೆ ಮಾಡಿದ್ದಾರೆ. ಅದರಿಂದಾಗಿಯೇ ನನಗೆ ಕಳೆದ ಬಾರಿಯಷ್ಟು ಟೆನ್ಶನ್ ಆಗಲೇ ಇಲ್ಲ. ಬಹಳ ಖುಷಿ ಖುಷಿಯಿಂದ ಈ ಬಾರಿ ಪ್ರಚಾರ ಮುಗಿಸಿದ್ದೇನೆ.

ಕ್ಷೇತ್ರದ ಎಲ್ಲ ಜನರಿಗೂ ನಾನು ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮೇ 10ರಂದು ತಪ್ಪದೇ ಮತ ಚಲಾಯಿಸಿ, ಬ್ಯಾಲೆಟ್ ಯುನಿಟ್ ನಲ್ಲಿ 4ನೇ ನಂಬರ್ ನಲ್ಲಿರುವ ಹಸ್ತದ ಗುರುತಿಗೆ ಮತ ಚಲಾಯಿಸಿ ನನ್ನನ್ನು ಆಶೀರ್ವದಿಸಿ ಎಂದು ಮತದಾರರಲ್ಲಿ ವಿನಂತಿಸುತ್ತೇನೆ ಎಂದು ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

## ಆರ್.ಆರ್. ಕಾಬೆಲ್ ಐ.ಪಿ.ಓ.ಗೆ ಅರ್ಜಿ ಸಲ್ಲಿಕೆ

ಹುಬ್ಬಳ್ಳಿ: ಭಾರತದ ಐದನೇ ಅತಿ–ದೊಡ್ಡ ಬ್ರಾಂಡೆಡ್ ತಂತಿ ಮತ್ತು ಕೇಬಲ್ ತಯಾರಕ ಸಂಸ್ಥೆಯಾದ ಆರ್.ಆರ್.ಕಾಬೆಲ್ ಲಿಮಿಟೆಡ್', ತನ್ನ ಡ್ರಾಫ್ಟ್ ರೆಡ್ ಹೆರಿಂಗ್ ಪ್ರಾಸ್ಪೆಕ್ಟಸ್'(ಡಿಆರ್ಎಚ್ಪಿ) ಅನ್ನು ಸೆಕ್ಯು–ರಿಟೀಸ್ ಎಕ್ಸ್ ಚೇಂಜ್ ಬೋರ್ಡ್ ಆಫ್ ಇಂಡಿಯಾ'ಗೆ (ಸೆಬಿ) ಸಲ್ಲಿಸಿದೆ.

ಕಂಪನಿಯು 225 ಕೋಟಿ ರೂ.ಗಳ ಹೊಸ ವಿತರಣೆ ಮತ್ತು ತಲಾ 5 ರೂ.ಗಳ ಮುಖಬೆಲೆಯ 17,236,808 ಈಕ್ವಿಟಿ ಷೇರುಗಳ ಮಾರಾಟದ ಪ್ರಸ್ತಾಪದ ಮೂಲಕ ಹಣವನ್ನು ಸಂಗ್ರಹಿಸಲು ಯೋಜಿಸಿದೆ. ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಕಂಪನಿಯು ಪಡೆದ 170 ಕೋಟಿ ರೂ.ಗಳ ಅಂದಾಜು ಮೊತ್ತದ ಸಾಲಗಳ ಪೂರ್ಣ ಅಥವಾ ಭಾಗಶಃ ಮರುಪಾವತಿ ಅಥ–ವಾ ಪೂರ್ವಪಾವತಿಗೆ ಹಣಕಾಸು ನೆರವಾಗಿ ನಿವ್ವಳ ಆದಾಯವನ್ನು ಬಳಸಲು ಆರ್.ಆರ್. ಕಾಬೆಲ್ ಪ್ರಸ್ತಾಪಿಸಿದೆ.

ಆರ್.ಆರ್. ಕಾಬೆಲ್'ನಲ್ಲಿ 20.99% ಪಾಲನ್ನು ಹೊಂದಿರುವ ಅಮೆರಿಕ ಮೂಲದ ಖಾಸಗಿ ಈಕ್ವಿಟಿ ಸಂಸ್ಥೆ ಟಿಪಿಜಿ ಏಷ್ಯಾ VII ಎಸ್‌ಎಫ್ ಪ್ರೈವೇಟ್ ಲಿಮಿಟೆಡ್', ಐಪಿಒ ಮೂಲಕ ಕಂಪನಿಯ ಸ್ವಲ್ಪ ಪಾಲನ್ನು ಮಾರಾಟ ಮಾಡಲಿದೆ.

ಆರ್. ಆರ್. ಕಾಬೆಲ್'ಸಂಸ್ಥೆಯು ಆರ್. ಆರ್. ಗ್ಲೋಬಲ್ ಗ್ರೂಪ್'ನ ಭಾಗವಾಗಿದ್ದು, 2022ರ ಹಣಕಾಸು ವರ್ಷದಲ್ಲಿ 4,386 ಕೋಟಿ ರೂ. ಆದಾಯವನ್ನು ಪಡೆದಿದೆ. ಡಿಸೆಂಬರ್ 2022ಕ್ಕೆ ಕೊನೆಗೊಂಡ ಒಂಬತ್ತು ತಿಂಗಳಲ್ಲಿ ಕಂಪನಿಯ ಆದಾಯವು 4,083 ಕೋಟಿ ರೂ.ನಷ್ಟಿತ್ತು. ಡಿಸೆಂಬರ್ 2022ಕ್ಕೆ ಕೊನೆಗೊಂಡ ಒಂಬತ್ತು ತಿಂಗಳಲ್ಲಿ ನಿವ್ವಳ ಲಾಭ 125 ಕೋಟಿ ರೂ.ಮತ್ತು 2022 ಹಣ–ಕಾಸು ವರ್ಷದಲ್ಲಿ ಸಂಸ್ಥೆಯ ನಿವ್ವಳ ಲಾಭ 214 ಕೋಟಿ ರೂ.ಗಳಾಗಿದೆ.

ತಂತಿಗಳು, ಕೇಬಲ್‌ಗಳು ಮತ್ತು ಬಹುಬಳಕೆ ವಿದ್ಯುತ್ ಉಪಕರಣಗಳನ್ನು (ಎಫ್‌ಎಂಇಜಿ) ಒಳಗೊಂಡಿರುವ ಭಾರತೀಯ ಗ್ರಾಹಕ ಎಲೆಕ್ಟ್ರಿಕಲ್ ಕ್ಷೇತ್ರದಲ್ಲಿ ಆರ್.ಆರ್.ಕಾಬೆಲ್' ಪ್ರಮುಖ ಕಂಪನಿಯಾಗಿದ್ದು, ಭಾರತದಲ್ಲಿ 20 ವರ್ಷಗಳ ಕಾರ್ಯಾಚರಣಾ ಇತಿಹಾಸವನ್ನು ಹೊಂದಿದೆ. ಆರ್. ಆರ್ ಕಾಬೆಲ್', ಭಾರತದಲ್ಲಿ ನಮ್ಮ ಸಹವರ್ತಿಗಳ ಪೈಕಿ ವೇಗವಾಗಿ ಬೆಳೆಯುತ್ತಿರುವ ಗ್ರಾಹಕ ವಿದ್ಯುತ್ ಕಂಪನಿಯಾಗಿದೆ.ಕಂಪನಿಯು ಹಣಕಾಸು ವರ್ಷ 2020–22ರ ನಡುವೆ 33% ಸಮಗ್ರ ವಾರ್ಷಿಕ ಬೆಳವಣಿಗೆ ದರ'('ಸಿ.ಎ.ಜಿ.ಆರ್.') ದಾಖಲಿಸಿದೆ. (ಮೂಲ: ಟೆಕ್ನೋಪಾಕ್ ವರದಿ)

ಮಾರುಕಟ್ಟೆ ಮೌಲ್ಯದ ವಿಚಾರಕ್ಕೆ ಬಂದರೆ, ಸಂಸ್ಥೆಯು 2022ರ ಹಣಕಾಸು ವರ್ಷದಲ್ಲಿ ಸುಮಾರು 8% ಮಾರುಕಟ್ಟೆ ಪಾಲನ್ನು ಹೊಂದಿದೆ. ಇದು 2015ರ ಹಣ–ಕಾಸು ವರ್ಷದಲ್ಲಿ ಶೇ.5ರಷ್ಟಿತ್ತು. ವರ್ತಕ–ರಿಂದ ಗ್ರಾಹಕರಿಗೆ(ಬಿ2ಸಿ) ತಂತಿಗಳು ಮತ್ತು ಕೇಬಲ್‌ಗಳ ಮಾರಾಟ ಮಾರ್ಗದಿಂದ ಆರ್.ಆರ್. ಕಾಬೆಲ್' ಹೆಚ್ಚಿನ ಆದ–ಾಯಪಡೆಯುತ್ತದೆ. ಹಣಕಾಸು ವರ್ಷ 22ರಲ್ಲಿ ಸುಮಾರು 75% ಆದಾಯವು ಬಿ 2 ಸಿ' ಮಾರಾಟ ಮಾರ್ಗದಿಂದ ಬಂದಿದೆ.

ಮೌಲ್ಯದ ದೃಷ್ಟಿಯಿಂದ ಆರ್.ಆರ್.ಕಾಬೆಲ್' ಭಾರತದಿಂದ ತಂತಿಗಳು ಮತ್ತು ಕೇಬಲ್‌ಗಳ ಅತಿದೊಡ್ಡ ರಫ್ತುದಾರನಾಗಿದೆ, ಇದು ರಫ್ತಿನ ಸುಮಾರು 11% ಮಾರುಕಟ್ಟೆ ಪಾಲನ್ನು ಹೊಂದಿದೆ. ಕಂಪನಿಯು 2022ರ ಹಣ–ಕಾಸು ವರ್ಷದ ವೇಳೆಗೆ ಭಾರತದಾದ್ಯಂತ 1,47,810 ಎಲೆಕ್ಟ್ರಿಷಿಯನ್‌ಗಳನ್ನು ಒಳಗೊಂಡ ಎಲೆಕ್ಟ್ರಿಷಿಯನ್‌ಗಳ ಅತಿದೊಡ್ಡ ಜಾಲಹೊಂದಿದೆ.

ಡಿಸೆಂಬರ್ 31, 2022ಕ್ಕೆ ಕೊನೆಗೊಂಡ ಒಂಬತ್ತು ತಿಂಗಳಲ್ಲಿ ಎಫ್‌ಎಂಇಜಿ' ವಿಭಾಗದಿಂದ ಆರ್.ಆರ್. ಕಾಬೆಲ್' ಆದ–ಾಯದ ಕೊಡುಗೆ 10.92% ರಷ್ಟಿದೆ.

ಆಕ್ಸಿಸ್ ಕ್ಯಾಪಿಟಲ್ ಲಿಮಿಟೆಡ್', ಎಚ್–ಎಸ್‌ಬಿಸಿ ಸೆಕ್ಯುರಿಟೀಸ್ ಅಂಡ್ ಕ್ಯಾಪಿಟಲ್ ಮಾರ್ಕೆಟ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್', ಸಿಟಿಗ್ರೂಪ್ ಗ್ಲೋಬಲ್ ಮಾರ್ಕೆಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್' ಮತ್ತು ಜೆಎಂ ಫೈನಾನ್ಷಿಯಲ್ ಲಿಮಿಟೆಡ್' ಈ ವಿತರಣೆಗೆ ಲೀಡ್ ಮ್ಯಾನೇಜರ್‌ಗಳಾಗಿವೆ.

BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089